# 15

# ವಿವೇಕದಿಂದ ಜೀವಿಸುವದು

# (7:1-29)

ಯೇಸುವಿನ ಪರ್ವತ ಪ್ರಸಂಗದ ಅಂತಿಮ ಭಾಗದಲ್ಲಿ, ಕಪಟಿಗಳ ಕುರಿತಾಗಿ, ಪ್ರಾರ್ಥನೆ, ನೀತಿಯಿಂದ ಜೀವಿಸುವ ನಿಯಮ, ಮತ್ತು ಸತ್ಯಕ್ಕೆ ಆಸಕ್ತ ವಿಧೇಯತೆಯೆಂಬ ವಿಷಯಗಳ ಮೇಲೆ ಆತನು ಪ್ರಸಂಗಿಸಿದ್ದಾನೆ. ಇತರರಿಗೆ ನ್ಯಾಯತೀರಿಸುವದರ ಕಪಟತನದ ಕುರಿತು ಎಚ್ಚರಿಸಿದ್ದಾನೆ (7:1-6). ಯೇಸು ತನ್ನ ಕೇಳುಗರಿಗೆ ಪ್ರಾರ್ಥನೆಯಲ್ಲಿ ಯಾವಾಗಲೂ ಇರುವಂಥದ್ದು, ದೇವರಿಂದ ಉತ್ತಮ ಬಹುಮಾನಗಳಿಗಾಗಿ ಹುಡುಕುವದರ ಕುರಿತಾಗಿ ಎಚ್ಚರಿಸಿದ್ದಾನೆ (7:7-11). ಬಂಗಾರದ ನಿಯಮವೆಂದು ಕರೆಯಲ್ಪಟ್ಟ ಆತನ ಪರಸ್ಪರ ಅನ್ಯೋನ್ಯತೆಯ ನಿಯಮವನ್ನು ಕೊಟ್ಟನು (7:12). ಪ್ರಸಂಗಕ್ಕೆ ಮುಕ್ತಾಯದ ಒತ್ತಡವಾಗಿ, ಆತನು ತಾರತಮ್ಯದ ಪರಂಪರವನ್ನು ಕೊಟ್ಟು ಕೇಳುಗರು ಆಯ್ಕೆಯನ್ನು ಮಾಡಲು ಪ್ರೋತ್ಸಾಹ ನೀಡಿದ್ದಾರೆ (7:13-27). ಆತನು ತನ್ನ ಬೋಧನೆಗಳನ್ನು ಮುಕ್ತಾಯ ಮಾಡಿದ ಮೇಲೆ, ಆ ಜನರು ಆಶ್ಚರ್ಯಗೊಂಡರು (7:28, 29).

## ನೀತಿಯುಕ್ತವಾದ ನ್ಯಾಯತೀರ್ಪು (7:1-6)

**1ತೀರ್ಪುಮಾಡ ಬೇಡಿರಿ; ಹಾಗೆ ನಿಮಗೂ ತೀರ್ಪಾಗುವದಿಲ್ಲ. 2ನೀವು ಮಾಡುವ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವದು; 3ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು. ನೀನು ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದೆ ನಿನ್ನ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ಯೋಚಿಸುವದೇಕೆ? 4ನೀನು ನಿನ್ನ ಸಹೋದರ ನಿಗೆ ನಿನ್ನ ಕಣ್ಣಿನೊಳಗಿಂದ ರವೆಯನ್ನು ತೆಗೆಯುತ್ತೇನೆ ಬಾ ಎಂದು ಹೇಳುವದು ಹೇಗೆ? ನಿನ್ನ ಕಣ್ಣಿನಲ್ಲಿ ತೊಲೆಯಿದೆಯಲ್ಲಾ. 5ಕಪಟಿಯೇ, ಮೊದಲು ನಿನ್ನ ಕಣ್ಣಿನೊಳಗಿಂದ ತೊಲೆಯನ್ನು ತೆಗೆದುಹಾಕಿಕೋ; ಆ ಮೇಲೆ ನಿನ್ನ ಸಹೋದರನ ಕಣ್ಣಿನೊಳಗಿಂದ ರವೆಯನ್ನು ತೆಗೆಯುವದಕ್ಕೆ ಚೆನ್ನಾಗಿ ಕಾಣಿಸುವದು.**

**6ದೇವರ ವಸ್ತುವನ್ನು ನಾಯಿಗಳಿಗೆ ಹಾಕಬೇಡಿರಿ; ನಿಮ್ಮ ಮುತ್ತುಗಳನ್ನು ಹಂದಿಗಳ ಮುಂದೆ ಚೆಲ್ಲಬೇಡಿರಿ. ಚೆಲ್ಲಿದರೆ ತಮ್ಮ ಕಾಲಿನಿಂದ ಅವುಗಳನ್ನು ತುಳಿದು ಹಿಂತಿರುಗಿ ಬಂದು ನಿಮ್ಮನ್ನು ಸೀಳಿಬಿಟ್ಟಾವು.**

ಯೇಸು 6ನೇ ಅಧ್ಯಾಯದಲ್ಲಿ ಚಿಂತೆಯ ಬಗ್ಗೆ ಹೇಳಿ 7ನೇ ಅಧ್ಯಾಯ ನ್ಯಾಯತೀರ್ಪಿನ ವಿಷಯಕ್ಕೆ ಬಂದನು, ಇತರರ ಬಗ್ಗೆ ವಿರುದ್ಧಾತ್ಮಕವಾದ ನ್ಯಾಯತೀರ್ಪು ಮಾಡಬಾರದೆಂದು ತನ್ನ ಜನರಿಗೆ ಸಲಹೆಗಳನ್ನು ಕೊಟ್ಟಿದ್ದಾನೆ. ಯೇಸು ತನ್ನ ಶಿಷ್ಯರಿಗೆ ನ್ಯಾಯತೀರ್ಪನ್ನು ಹಿಂದೆಯೆ ಬಿಟ್ಟು ಬಿಡಿರಿ ಎಂದು ಹೇಳಲಿಲ್ಲ, ದೇವರ ರಾಜ್ಯದ ಪ್ರಜೆಗಳಾಗಿರುವವರೆಗೆ ಆತ್ಮೀಕ ವಿವೇಚನೆ ಅವಶ್ಯಕವಾಗಿ ಬೇಕಾಗುತ್ತದೆ.

**ವಚನ 1. ತೀರ್ಪುಮಾಡಬೇಡಿರಿ ಹಾಗೆ ನಿಮಗೂ ತೀರ್ಪಾಗುವದಿಲ್ಲ** ಎಂದು ಯೇಸು ಆಜ್ಞೆಮಾಡಿದ್ದಾನೆ. ಯೇಸು ಪ್ರಸ್ತಾಪಿಸಿದ ನಿಷೇದವು - *mē* ವರ್ತಮಾನದ ಆಜ್ಞಾರ್ಥಕ ವಾದ ಕ್ರಿಯಾಪದ ಗ್ರೀಕ್ ಭಾಷೆಯ ನಿರ್ಮಾಣದೊಂದಿಗೆ - ಕರ್ತವ್ಯ ನಿರತವಾಗಿರುವ ಕಾರ್ಯಗಳನ್ನು ನಿಲ್ಲಿಸುವದಕ್ಕಾಗಿ ಕೇಳಿಕೊಳ್ಳಲಾಗಿದೆ. NLTಯಲ್ಲಿ "ಇತರರಿಗೆ ನ್ಯಾಯ

ತೀರ್ಪುಮಾಡುವದು ನಿಲ್ಲಿಸಿರಿ'' ಎಂದು ಅನುವಾದಿಸಲಾಗಿದೆ. ಯೇಸು ಯಾವದೇ ತರವಾದ ತೀರ್ಪು ಮಾಡುವದನ್ನು ಮಹತ್ವಪೂರ್ಣವಾಗಿ ಹೇಳಿ ಖಂಡಿಸುತ್ತಿರುವನೋ? ಇತರೆ ವಾಕ್ಯಭಾಗಗಳಿಂದ, ವಿಷಯವು ಅದಲ್ಲವೆಂದು ನಾವು ಅರಿತಿದ್ದೇವೆ. ಉದಾಹರಣೆಗೆ, ಈ ಪರ್ವತ ಪ್ರಸಂಗದಲ್ಲಿ ತರುವಾಯ, ಆತನು ''ಸುಳ್ಳು ಪ್ರವಾದಿಗಳ ವಿಷಯದಲ್ಲಿ ಎಚ್ಚರಿಕೆಯಾಗಿರಿ ... ಅವರ ಫಲಗಳಿಂದ ಅವರನ್ನು ತಿಳುಕೊಳ್ಳುವಿರಿ'' ಎಂದು ಹೇಳಿದರು (7:15, 16). ಅವರು ಸತ್ಯವಂತರೋ ಅಥವಾ ಸುಳ್ಳುಗಾರರೋ ಮತ್ತು ಅವರ ''ಫಲಗಳು'' ಉತ್ತಮವಾದವೋ ಅಥವಾ ಕೆಟ್ಟವುಗಳೋ ಎಂಬುದನ್ನು ನಿರ್ಧರಿಸಲು ಈ ಬೋಧಕರ ಸಿದ್ಧಾಂತವನ್ನು ಮತ್ತು ಜೀವನ ಶೈಲಿಯ ಕುರಿತು ತೀರ್ಪುಮಾಡಬೇಕೆಂದು ಆತನು ಹೇಳುತ್ತಿದ್ದನು. ಯೋಹಾನನ ಸುವಾರ್ತೆಯಲ್ಲಿ ಯೇಸು ಹೀಗೂ ಸಹ ಹೇಳಿದ್ದಾನೆ. ''ಕಣ್ಣಿಗೆ ತೋರಿದ್ದರ ಮೇಲೆ ತೀರ್ಪುಮಾಡಬೇಡಿರಿ; ನ್ಯಾಯವಾದ ತೀರ್ಪುಮಾಡಿರಿ'' ಎಂದು ಹೇಳಿದನು (ಯೋಹಾನ 7:24). ಒಬ್ಬನ ವೈಯಕ್ತಿಕ ಅಳತೆ ಮೇಲೆ ನ್ಯಾಯ ತೀರ್ಪು ಮಾಡುವದನ್ನು ಆತನು ಎಚ್ಚರಿಸಿದನು, ಆದರೆ ದೇವರ ನ್ಯಾಯ ತೀರ್ಪಿನ ನೀತಿಯ ಮಟ್ಟವನ್ನು ಉಪಯೋಗಿಸಲು ಒತ್ತಾಯಪಡಿಸುತ್ತದೆ.

''ತೀರ್ಪುಮಾಡಬೇಡಿರಿ'' ಎಂಬ ನಮ್ಮ ಕರ್ತನ ಹೇಳಿಕೆ ಒಳ್ಳೆಯದರ ಮತ್ತು ಕೆಟ್ಟದರ ಮಧ್ಯ ವ್ಯತ್ಯಾಸ ತಿಳಿದುಕೊಳ್ಳುವದನ್ನು ಖಂಡಿಸುತ್ತಾ ಇಲ್ಲಾ, ನಾವು ಈ ತರಹಾ ನ್ಯಾಯ ತೀರ್ಪುಮಾಡುವದನ್ನು ಬೇರೆ ವಾಕ್ಯಭಾಗದಲ್ಲಿ ಖಂಡಿಸಲಾಗಿದೆ (ರೋಮಾಪುರ 16:17, 18; 1 ಕೊರಿಂಥ 5:9-13; 2 ಕೊರಿಂಥ 6:14-18; ಗಲಾತ್ಯ 1:9; ತೀತ 1:9-14; 3:10, 11; 1 ಯೋಹಾನ 4:1-3; 2 ಯೋಹಾನ 9-11; ಯೂದನು 3, 4). ಯೇಸುವಿನ ಮಾತುಗಳು ಸಭೆಯ ಶಿಸ್ತನ್ನು ಖಂಡಿಸುತ್ತಿವೆ ಎಂದು ಅರ್ಥಮಾಡಿಕೊಳ್ಳಬಾರದು. ಸ್ವತಃ ಯೇಸು, 18:15-18ರಲ್ಲಿ, ಪೌಲನು ಮಾಡಿದಂತೆಯೇ ಇದನ್ನು ಆಜ್ಞಾಪಿಸಿದ್ದಾನೆ (1 ಕೊರಿಂಥ 5:1-5; 2 ಥೆಸಲೋನಿಕ 3:6, 14, 15). ಒಬ್ಬ ಸಹೋದರನು ದೋಷವುಳ್ಳವನಾಗಿರುವಾಗ (ನೋಡಿರಿ ಗಲಾತ್ಯ 6:1) ದೇವರ ನೀತಿಯ ಮಟ್ಟದಿಂದ ನ್ಯಾಯತೀರ್ಪು ಮಾಡದಿದ್ದರೆ ಹೇಗೆ ನಾವು ಅದನ್ನು ತಿಳಿದುಕೊಳ್ಳುತ್ತೇವೆ?

ಆದುದರಿಂದ, ಯೇಸು ಆಜ್ಞೆ ಮಾಡಿದ್ದನ್ನು ಪರ್ವತ ಪ್ರಸಂಗದ ಹಿನ್ನಲೆಯಲ್ಲಿ ಅದರ ಉದ್ದೇಶವನ್ನು ಅವಲೋಕನ ಮಾಡಬೇಕು - ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತಲೂ ದೇವರ ನೀತಿಯು ಭಿನ್ನವಾಗಿದೆ (5:20). ''ತೀರ್ಪು'' (*krinō*) ಎಂಬ ಗ್ರೀಕ್ ಭಾಷೆಯಲ್ಲಿನ ಶಬ್ದವು ಆರಿಸಿಕೊಳ್ಳುವದು, ಆಯ್ಕೆ ಮಾಡುವದು, ಅಥವಾ ನ್ಯಾಯ ತೀರ್ಪನ್ನು ನಿರ್ಧರಿಸುವದನ್ನು ಸೂಚಿಸಲು ಉಪಯೋಗಿಸಬಹುದು. ಯೇಸು ಶಾಸ್ತ್ರಿಗಳ ಮತ್ತು ಫರಿಸಾಯರ ಹೊರಗಿನ ತೋರಿಕೆ ಮತ್ತು ಕಠಿಣವಾದ ನ್ಯಾಯ ತೀರ್ಪಿನ ನಡವಳಿಕೆ, ಮತ್ತು ಸ್ವನೀತಿಯತೆ ತೋರಿಸುವದನ್ನು ಖಂಡಿಸುವದು ಈ ಮೂಲ ಪಾಠದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಇಂಥಹಾ ಗುಣದ ಆತ್ಮವನ್ನು ತನ್ನ ಹಿಂಬಾಲಕರು ದೂರವಿರಿಸಬೇಕೆಂದು ಉತ್ತೇಜಿಸುತ್ತಿದ್ದಾನೆ. ಹೊರಗಿನ ತೋರಿಕೆಯಿಂದ ಇತರರನ್ನು ತೀರ್ಪುಮಾಡುವದು ಅಥವಾ ಇನ್ನೊಬ್ಬರ ಉದ್ದೇಶ ವನ್ನು ಅಥವಾ ಹೃದಯವನ್ನು ತೀರ್ಪುಮಾಡುವದು ಆತನ ಆಜ್ಞೆ ನಿಷೇಧಿಸುತ್ತದೆ (ನೋಡಿರಿ ಯೋಹಾನ 7:24; 1 ಕೊರಿಂಥ 2:11). ತನ್ನ ಸ್ವಂತ ಪಾಪಗಳನ್ನು ನೋಡಲು ತಿರಸ್ಕರಿಸುವಂತಹ ಗುಣದೊಂದಿಗೆ ಇನ್ನೊಬ್ಬರ ಜೀವನದಲ್ಲಿ ತಪ್ಪನ್ನು ಕಂಡುಹಿಡಿಯುವ ನಡತೆಯನ್ನು ಸಹ ಆ ಆಜ್ಞೆ ಖಂಡಿಸುತ್ತದೆ (7:3, 4). ನಾವೆಲ್ಲರು ಯೇಸು ಕ್ರಿಸ್ತನ ನೀತಿಯುಳ್ಳ ತೀರ್ಪಿನಿಂದ ನ್ಯಾಯತೀರ್ಪು ಹೊಂದಲಿರುವದರಿಂದ ನಾವು ನಿತ್ಯವಾದ ತೀರ್ಪನ್ನು ಇನ್ನೊಬ್ಬರ ಮೇಲೆ ಮಾಡಲು ಸಾಧ್ಯವಿಲ್ಲ (ಯೋಹಾನ 5:22; ರೋಮಾಪುರ 2:1, 2; 14:4, 10-12; 2 ಕೊರಿಂಥ 5:10; 2 ತಿಮೋಥೆ 4:8; ಪ್ರಕಟಣೆ 20:11-15).

ಸಮ ನೆಲದ ಮೇಲೆ ಯೇಸು ಮಾಡಿದ ಪರ್ವತ ಪ್ರಸಂಗದಲ್ಲಿ, ಕರುಣೆಯ ಹಿನ್ನಲೆಯಲ್ಲಿ

ಯೇಸುವಿನ ಮಾತುಗಳು ಹೇಳಲಾಗಿವೆ: "ನಿಮ್ಮ ತಂದೆ ಕರುಣವುಳ್ಳವನಾಗಿರುವ ಪ್ರಕಾರವೇ ನೀವೂ ಕರುಣೆವುಳ್ಳವರಾಗಿರಿ. ಇದಲ್ಲದೆ ತೀರ್ಪುಮಾಡಬೇಡಿರಿ, ಆಗ ನಿಮಗೂ ತೀರ್ಪಾಗುವದಿಲ್ಲ; ಅಪರಾಧಿಯೆಂದು ನಿರ್ಣಯಿಸಬೇಡಿರಿ; ಆಗ ನಿಮ್ಮನ್ನೂ ಅಪರಾಧಿಗಳೆಂದು ನಿರ್ಣಯಿಸುವದಿಲ್ಲ; ಬಿಡಿಸಿರಿ, ಆಗ ನಿಮ್ಮನ್ನು ಬಿಡಿಸುವರು" (ಲೂಕ 6:36, 37). ಒಬ್ಬ ವ್ಯಾಖ್ಯಾನಗಾರನು ಹೀಗೆ ಹೇಳಿದ್ದಾನೆ, "ಕೇವಲ ನಾವು ಕ್ಷಮಿಸಿದಂತೆ ನಾವು ಕ್ಷಮಿಸಲ್ಪಡುತ್ತೇವೆ, ಅದದರಿಂದ ಇನ್ನೊಬ್ಬರ ತೀರ್ಪಿನ ವಿಷಯದಲ್ಲಿ ನಾವು ಉದಾರತೆಯನ್ನು ಹೊಂದಿರಬೇಕು ಯಾಕೆಂದರೆ ದೇವರು ಉದಾರತೆಯಿಂದ ನಮ್ಮೊಂದಿಗೆ ವ್ಯವಹರಿಸುತ್ತಿದ್ದಾನೆ."[1]

**ವಚನ 2.** ತೀರ್ಪಿನ ವಿರುದ್ಧವಾಗಿ ಕೊಟ್ಟ ಯೇಸುವಿನ ಆಜ್ಞೆಗೆ ಆಧಾರವನ್ನು ಒದಗಿಸುತ್ತಾನೆ: **ನೀವು ಮಾಡುವ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವದು; ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು.** "ತೀರ್ಪು" (*krimati krinete krithēsesthe*) ಮತ್ತು **"ಅಳತೆ"** (*metrōi metreite metrēthēsetai*). ಎಂಬ ಶಬ್ದಗಳನ್ನು ಈ ವಚನದಲ್ಲಿ ಪದೆ ಪದೆ ಕವಿತೆ ರೂಪದಲ್ಲಿ ಉಪಯೋಗಿಸಲಾಗಿದೆ. ಇದಕ್ಕೆ ಅಕ್ಷರಶಃವಾದ ಭಾಷಾಂತರ ಹೀಗಿರಬಹುದು "ನೀವು ತೀರ್ಪು ಮಾಡಿದಂತೆಯ, ನಿಮಗೆ ತೀರ್ಪಾಗುವದು ಮತ್ತು ನೀವು ಅಳೆದಂತೆಯೇ, ಹಾಗೆಯೇ ನಿಮಗೂ ಅಳೆಯುವರು."

"ತೀರ್ಪು ಕೊಡುವದು" ಮತ್ತು "ಅಳತೆ ಮಾಡುವದು" ಎರಡು ಸಮಾನಪದಗಳಿರುವ ಈ ವಚನವು ಸಮನಾರ್ಥಕ ಸಾದೃಷ್ಯ ರೂಪದಲ್ಲಿ ನಿರ್ಮಿಸಲಾಗಿದೆ (ನೋಡಿರಿ ಮಾರ್ಕ 4:24; ಲೂಕ 6:38). Mishnah ಹೀಗೆ ಹೇಳುತ್ತದೆ, "ಒಬ್ಬ ಮನುಷ್ಯನು ಯಾವುದರಿಂದ ಅಳತೆ ಮಾಡುವನೋ, ಅದರಿಂದಲೇ ಅವನಿಗೂ ಅಳೆಯಲಾಗುವದು."[2] ಈ ರೂಪಾಲಂಕಾರವು ಮಾರುಕಟ್ಟೆಯ ಸ್ಥಳದಿಂದ ತೆಗೆದು ಕೊಳ್ಳಲಾಗಿದೆ, ಮಾರುವವನು ತನ್ನ ವಸ್ತುಗಳನ್ನು ಮಾರಲು ತನ್ನ ಅಳತೆಯಿಂದಲೇ ಅವನು ಕೊಂಡುಕೊಳ್ಳುವವನಿಗೆ ಕೊಡುವನು. Michael J. Wilkins ರವರು ಹೀಗೆ ವಿವರಿಸಿದ್ದಾರೆ, "ಅಳತೆಯು ತಕ್ಕಡಿಯಾಗಿರಬಹುದು, ಅಥವಾ ಪಾತ್ರೆ ಅಥವಾ ಕೋಲನ್ನು ಬಾರ ಅಥವಾ ದೂರ ಅಳೆಯಲು ಉಪಯೋಗಿಸುತ್ತಾರೆ, ಆದರೆ ಕೆಲವು ಸಾರಿ ಅದನ್ನು ಸಾಂಕೇತಿಕವಾಗಿ ಇಲ್ಲಿ ಉಪಯೋಗಿಸಿದಂತೆಯೇ ಉಪಯೋಗಿಸಲಾಗಿದೆ (cf. 23:32)."[3]

ಯೇಸು ಬೇಡವೆಂದು ಹೇಳಿರುವ ನ್ಯಾಯತೀರ್ಪಿನ ವಿಷಯದಲ್ಲಿ ನಾವು ತೀರ್ಪನ್ನು ಮಾಡುವಾಗ ಎಚ್ಚರವಾಗಿರಬೇಕು ಯಾಕೆಂದರೆ ಆತನು ಇತರರಿಗೆ ಅವನು ತೀರ್ಪುಮಾಡಿದ ಅದೇ ಮಟ್ಟದಿಂದ ತನಗೂ ತೀರ್ಪುಮಾಡುವರು. ನಾವು ಇತರರಿಗೆ ಕಠಿಣವಾಗಿ ತೀರ್ಪು ಮಾಡಿದ್ದರೆ ನಾವು ಸಹ ಉಚ್ಚ ನ್ಯಾಯದೀಶನಾದ ದೇವರಿಂದ ಕಠಿಣ ತೀರ್ಪನ್ನು ನಿರೀಕ್ಷಿಸುವವರಾಗಿದ್ದೇವೆ. ಟಲ್ಮಾಂಡ್ ಹೀಗೆ ಹೇಳುತ್ತದೆ, "ಒಬ್ಬನು ತನ್ನ ನೆರೆಯವನ ಮೇಲೆ (ದೈವಿಕ) ನ್ಯಾಯ ತೀರ್ಪು ಕೊಟ್ಟರೆ ಕೊಟ್ಟವನೆ ಮೊದಲು [ತನ್ನ ಪಾಪಗಳಿಗಾಗಿ] ತೀರ್ಪು ಹೊಂದುವನು."[4] David Hill ಅವರು ವಿವರಿಸಿದ್ದು ಹೀಗಿದೆ, "ರಬ್ಬಿಯರ ಪ್ರಕಾರ, ದೇವರು ಲೋಕವನ್ನು ಎರಡು ಅಳತೆಗಳಿಂದ - ಕರುಣೆ ಮತ್ತು ನೀತಿಯಿಂದ ತೀರ್ಪುಕೊಟ್ಟನು."[5] ಒಬ್ಬನು ಇತರರ ವಿಷಯದಲ್ಲಿ ಕರುಣೆ ತೋರಿದರೆ ದೇವರು ಅವನಿಗೆ ಕರುಣೆ ತೋರುವನು (ಯಾಕೋಬ 2:13).

**ವಚನಗಳು 3, 4.** ಯೇಸು ಈ ವಿಷಯಕ್ಕೆ ಸಂಬಂಧಿಸಿದಂತೆಯೇ ಎರಡು ಉದಾಹರಣೆಗಳನ್ನು ಹೇಳಿದ್ದಾನೆ. ಮೊದಲನೆಯದು ತಪ್ಪನ್ನು ಕಂಡುಹಿಡಿಯಲು ಒಳಗೊಂಡಿರುವದು (**ಕಡೆಗೆ ನೋಡು**; 7:3), ಮತ್ತು ಎರಡನೆಯದು ಅದನ್ನು ಸರಿಮಾಡುವ ಅವಶ್ಯಕತೆ (**ಹೊರಗೆ ... ತೆಗೆಯುವದು**; 7:4). ಆತನು ಪರಿಣಾಮಕಾರಿಯಾಗಿ ಹೀಗೆ ಕೇಳಿದನು, "ನಿನ್ನಲ್ಲಿಯೋ ದೊಡ್ಡ ತಪ್ಪನ್ನು ಹೊಂದಿಕೊಂಡಿರುವಾಗ ನಿನ್ನ ಸಹೋದರನಲ್ಲಿರುವ ಚಿಕ್ಕ ತಪ್ಪನ್ನು ಇರುವಾಗ ನೀನು ಹೇಗೆ ಆತನನ್ನು ಟೀಕಿಸುತ್ತಿ?" **ಚಿಕ್ಕ ಕಣವನ್ನು**

(*karphos*) ಎಂದು ಅನುವಾದಿಸಿದ ಗ್ರೀಕ್ ಶಬ್ದವು ಕಡ್ಡಿ ಅಥವಾ ಕಟ್ಟಿಗೆ ಒಂದು ಚಿಕ್ಕ ಕಣವನ್ನು ಸೂಚಿಸುತ್ತದೆ. NIVಯಲ್ಲಿ "ಕಟ್ಟಿಗೆ ಕೊಯ್ಯುವಾಗ ಬರುವ ದೂಳು" ಎಂದು ಅನುವಾದಿಸಲಾಗಿದೆ, NJBಯಲ್ಲಿ "ಬಿದಿರಿನ ತುಂಡು" ಎಂದು ಅನುವಾದಿಸಲಾಗಿದೆ. ಯೇಸು ಯಾರು ತೀರ್ಪುಮಾಡುತ್ತಾರೋ ಅವರ ಜೀವನದಲ್ಲಿರುವ ಪಾಪದ ಕುರಿತು ತೀರ್ಪುಮಾಡಲಿಲ್ಲ, ಆದರೆ ತೀರ್ಪುಮಾಡಲ್ಪಟ್ಟವನ ಜೀವನದಲ್ಲಿ ಚಿಕ್ಕ ಪಾಪವಿರುವವನೊಂದಿಗೆ ವಿಮರ್ಶಕನ ಜೀವನದಲ್ಲಿ ಹೆಚ್ಚು ದೊಡ್ಡ ಪಾಪವಿರುವವನ ಭಿನ್ನತೆಯನ್ನು ಹೇಳುತ್ತಿದ್ದಾನೆ. **ತೊಲೆ** (*dokos*) ಎಂದು ಅನುವಾದಿಸಿದ ಶಬ್ದವು ಕಟ್ಟಿಗೆಯ ತೊಲೆಯೆಂದು ಸೂಚಿಸಲಾಗಿದೆ, ಅದನ್ನು ಮನೆಯ ಚಾವಣಿಗೆ ಆಶ್ರಯವಾಗಿ ನಿಲ್ಲಿಸುತ್ತಾರೆ. ಯೇಸು ಅನೇಕ ವರ್ಷಗಳ ಕಾಲ "ಬಡಿಗ" (*tektōn*) ಅಥವಾ "ಕಟ್ಟುವವನಾಗಿ" ಕೆಲಸಮಾಡಿದ್ದರಿಂದ (13:55; ಮಾರ್ಕ 6:3) ಈ ಅಲಂಕಾರಿಕವನ್ನು ಉಪಯೋಗಿಸಿರಬಹುದು.

ಪರ್ವತ ಪ್ರಸಂಗದ ಮೊದಲಿನ ಭಾಗದಲ್ಲಿರುವಂತೆಯೇ, ಯೇಸು ತನ್ನ ಆಲೋಚನೆಯನ್ನು ಸ್ಪಷ್ಟಪಡಿಸಲು ಅತಿಶಯೋಕ್ತಿಯನ್ನು ಉಪಯೋಗಿಸಿದನು (ನೋಡಿರಿ 5:23, 24, 29, 30, 34-36, 40). ಹಾಗಿದ್ದರೂ, ಆತನು ಇಲ್ಲಿ ಉಪಯೋಗಿಸಿದ ಅತಿಶಯವಾಗಿರುವದು ಹಾಸ್ಯಸ್ಪದವಾಗಿದೆ ಹಾಗೂ ಅಸಂಗತವಾಗಿದೆ. ಬಹುಶಃ ಅದು ಒಂಟೆಯು ಸೂಜಿಯ ಕಣ್ಣಿನಲ್ಲಿ ಹಾದು ಹೋಗುವ (19:24) ಅಥವಾ ಸೊಳ್ಳೆ ಸೋಸುವವರು ಒಂಟೇ ನುಂಗುವವರು (23:24) ಎಂಬ ಯೇಸುವಿನ ಅಲಂಕಾರಕ್ಕೆ ಹೋಲಿಸಬಹುದು. Craig S. Keener ಟೀಕಿಸಿ ಅಭಿಪ್ರಾಯ ಹೇಳಿದ್ದಾರೆ, "ತಾವೇ ಕುರುಡರು ಮತ್ತೊಬ್ಬರಿಗೆ ದಾರಿತೋರಿಸುವದಕ್ಕೆ ಹೋಗುತ್ತಾರೆ (15:14; 23:16), ಒಬ್ಬನು ತನ್ನ ಕಣ್ಣುಗಳಿಗೆ ಕುರುಡನು ಶಸ್ತ್ರ ಚಿಕಿತ್ಸೆ ಮಾಡುವದನ್ನು ಬಯಸುವದಿಲ್ಲ."[6] ಇನ್ನೊಬ್ಬನ ಕಣ್ಣಿನಲ್ಲಿ ಒಂದು "ಚಿಕ್ಕ ಒಣಗಿದ ಕಡ್ಡಿ" ಅಥವಾ ಒಂದು "ತೊಲೆ" ಇರುವಾಗ ಅದು ಚಿಕ್ಕ ಮತ್ತು ದೊಡ್ಡ ಪಾಪಗಳ ಆಲೋಚನೆಯಾಗಿದೆ.[7]

**ವಚನ 5.** ಯೇಸು ಎರಡನೆಯ ಉದಾಹರಣೆಯನ್ನು ತಪ್ಪನ್ನು ಸರಿಪಡಿಸಲು ಉಪಯೋಗಿಸಿದನು. ಒಬ್ಬ ಮನುಷ್ಯನ ಹೆಚ್ಚಿನ ಪಾಪ ಹೊಂದಿರುವಾಗ ಅವನನ್ನು **ಕಪಟಿ** ಎಂದು ಕರೆದನು (ನೋಡಿರಿ 6:2, 5ರ ವ್ಯಾಖ್ಯಾನ). ಇತರರಿಗಿಂತಲೂ ತಾನೇ ನೀತಿವಂತನೆಂದು ಆಲೋಚಿಸಿದ ಆತನನ್ನು ವೈಯಕ್ತಿಕವಾಗಿ ಸ್ವನೀತಿಯನ್ನು ತೋರಿಸಿಕೊಳ್ಳುವನ್ನಾಗಿ ಚಿತ್ರಿಸಿದನು. ತಾನೇ ನೀತಿವಂತನೆಂದು ತೋರಿಸಿಕೊಳ್ಳುವ ಸ್ವಾಭಾವವು ಇತರರನ್ನು ಖಂಡಿಸುವಾಗ ತನಗೆ ತೀರ್ಪುಮಾಡಿಕೊಳ್ಳುವನು (ನೋಡಿರಿ 2 ಸಮುವೇಲ 12:1-14). ಆ ವಿಷಯದ ಬೆಳಕಿನಲ್ಲಿ, ಟಾಲ್ಮಂಡ್ ಒಳ್ಳೆಯ ಸಲಹೆ ಇಲ್ಲಿ ನೀಡಿದೆ: "ನಿನ್ನಲಿರುವ ದೋಷದಿಂದ ನಿನ್ನ ನೆರೆಹೊರೆಯವರಿಗೆ ಚುಚ್ಚುಮಾತನಾಡಿ ಅವರನ್ನು ದೂಷಿಸಬೇಡ."[8]

ಸ್ವಲ್ಪ ಪಾಪವನ್ನು ಅಲಕ್ಷ್ಯ ಮಾಡಬೇಕೆಂದು ಯೇಸು ಹೇಳಲಿಲ್ಲ, ಅದರ ಬದಲಾಗಿ, ಆತನು ಹೀಗೆ ಹೇಳಿದನು, **ಮೊದಲು ನಿನ್ನ ಕಣ್ಣಿನೊಳಗಿಂದ ತೊಲೆಯನ್ನು ತೆಗೆದುಹಾಕಿಕೋ; ಆ ಮೇಲೆ ನಿನ್ನ ಸಹೋದರನ ಕಣ್ಣಿನೊಳಗಿಂದ ರವೆಯನ್ನು ತೆಗೆಯುವದಕ್ಕೆ ಚೆನ್ನಾಗಿ ಕಾಣಿಸುವದು.** ತನ್ನ ಸಹೋದರನಿಗೆ ತೀರ್ಪುಮಾಡುವಂತೆ ಆ ದೂಷಕನು "ತೊಲೆಯನ್ನು" ತೆಗೆಯಬೇಕೆಂಬ ಆಲೋಚನೆ ಇಲ್ಲಿ ಇಲ್ಲ; ಅದಕ್ಕಿಂತ ಹೆಚ್ಚಾಗಿ, ತನ್ನ ಸಹೋದರನ ಕಣ್ಣಿನಲ್ಲಿರುವ "ಚಿಕ್ಕ ರವೆ"ಯನ್ನು ಆತನು ಬಹಳ ಸ್ಪಷ್ಟವಾಗಿ ನೋಡಿ ತೆಗೆದುಹಾಕಿಕೊಳ್ಳಲು ಸಹಾಯ ಮಾಡುವಂತೆ ಅವನು ತೊಳೆಯನ್ನು ತನ್ನ ಕಣ್ಣಿನಿಂದ ತೆಗೆದುಹಾಕಿಕೊಳ್ಳಬೇಕು. ಅಂಥಹ ಒಂದು ಚಿಕ್ಕ ರವೆ ತೆಗೆಯುವ ಬಲ ಆತನ ಸ್ವಂತ ನೀತಿಯ ಕಾರ್ಯವಲ್ಲ, ಆದರೆ ವಾಸ್ತವವಾಗಿ ತಪ್ಪುಮಾಡುವ ಸಹೋದರನನ್ನು ಪ್ರೀತಿಯಿಂದ ಇದನ್ನು ಮಾಡು ಮತ್ತು ಉದಾರತೆಯ ಮನಸ್ಸಿನಿಂದ ಆತನಿಗೆ ಸಹಾಯ ಮಾಡಬೇಕು (ಲೂಕ 17:3; ರೋಮಾಪುರ 15:1; ಗಲಾತ್ಯ 6:1; 2 ತಿಮೊಥೆ; 4:2; ತೀತ 1:13).

**ವಚನ 6.** ಆಜ್ಞೆಯು ಅನ್ಯಾಯದ ತೀರ್ಪು ಮಾಡುವದನ್ನು ತಡೆಯುತ್ತದೆ, ಯೇಸು ತನ್ನ ಶಿಷ್ಯರಿಗೆ ವಿಶೇಷ ವ್ಯತ್ಯಾಸವನ್ನು ಮಾಡಲು ಕೇಳಿಕೊಂಡನು: **ದೇವರ ವಸ್ತುವನ್ನು ನಾಯಿಗಳಿಗೆ ಹಾಕಬೇಡಿರಿ; ನಿಮ್ಮ ಮುತ್ತುಗಳನ್ನು ಹಂದಿಗಳ ಮುಂದೆ ಚೆಲ್ಲಬೇಡಿರಿ. ಚೆಲ್ಲಿದರೆ ತಮ್ಮ ಕಾಲನಿಂದ ಅವುಗಳನ್ನು ತುಳಿದು ಹಿಂತಿರುಗಿ ಬಂದು ನಿಮ್ಮನ್ನು ಸೀಳಿಬಿಟ್ಟಾವು.**

ಹಿಂದಿನ ಕಾಲದಲ್ಲಿ ಕೆಲವು ಸಾರಿ ನಾಯಿಗಳನ್ನು ಪಳಗಿಸುತ್ತಿದ್ದರು. ಅವು ಹಿಂಡಾಗಿ ತಿರುಗುತ್ತಿರುವಾಗ ಅವುಗಳಿಗೆ ರೇಗಿಸಿದರೆ ಅಥವಾ ಹಸಿವೆಯಾಗಿದ್ದರೆ ಅಂಥಹ ಸಮಯದಲ್ಲಿ ಅವುಗಳು ಮನುಷ್ಯರ ಮೇಲೆ ಎರಗಿ ಬೀಳುತ್ತಿದ್ದವು. ಆದ ಕಾರಣ, ಯೆಹೂದ್ಯರು ಅವುಗಳ ಬಗ್ಗೆ ನಕರಾತ್ಮಕದೊರಣೆ ಹೊಂದಿದ್ದರು (ಕೀರ್ತನೆ 22:16; ಜ್ಞಾನೋಕ್ತಿ 26:11; ಲೂಕ 16:21; 2 ಪೇತ್ರ 2:22; ಪ್ರಕಟಣೆ 22:15). ಒಬ್ಬ ವ್ಯಕ್ತಿಯನ್ನು "ನಾಯಿ" ಎಂದು ಕರೆಯುವದು ದೊಡ್ಡ ಅಪಮಾನವಾಗಿರುತ್ತದೆ ಅವನಿಗೆ ಅಡತಡೆಯಾಗಬಹುದು (1 ಸಾಮುವೇಲ 17:43; 2 ಸಾಮುವೇಲ 16:9). ಯೆಹೂದ್ಯರು ಅನ್ಯರಿಗೆ "ನಾಯಿಗಳು" ಎಂದು ಕರೆಯುತ್ತಿದ್ದರು (15:26, 27), ಮತ್ತು ಪೌಲನು ಸುಳ್ಳು ಬೋಧಕರಿಗೆ ಈ ಪದವನ್ನು ಉಪಯೋಗಿಸಿದನು (ಫಿಲಿಪ್ಪಿ 3:2).

"ಪರಿಶುದ್ಧತೆ ಅಂದರೆ ಏನು" (*to hagion*) ಎನ್ನುವ ವಾಕ್ಯಭಾಗವನ್ನು ಸ್ವಲ್ಪ ಬದಲಾವಣೆಯೊಂದಿಗೆ ಸೆಪ್ಟುಜಂಟ್‌ನಲ್ಲಿ ದೋಷಪರಿಹಾರಕ್ಕಾಗಿ ಸಮರ್ಪಿಸಿರುವ ಆಹಾರವನ್ನು ಸೂಚಿಸುತ್ತದೆ (ವಿಮೋಚನಕಾಂಡ 29:33, 34; ಯಾಜಕಕಾಂಡ 2:3; 22:10-16; ಅರಣ್ಯಕಾಂಡ 18:8-19). ದೇವರಿಗೆ ಸಮರ್ಪಿಸಿದ್ದನ್ನು ಸ್ವಮರ್ಯಾದೆಯುಳ್ಳ ಯೆಹೂದ್ಯನು ನಾಯಿಗೆ ಆಹಾರವಾಗಿ ಕೊಡುವದಿಲ್ಲ. ಯೇಸು ಶುಭವಾರ್ತೆಯನ್ನು ಪ್ರಕಟಿಸುತ್ತಿದ್ದಾನೆ, ಅದುವೆ ಸುವಾರ್ತೆ, ಶ್ರೇಷ್ಟ ಗೌರವವನ್ನು ಕೇಳುತ್ತದೆ ಮತ್ತು ಅದನ್ನು ಕೇಳಿಸಿಕೊಳ್ಳಲು ನಿರಾಕರಿಸಿದವರಿಗೆ ಅದನ್ನು ವ್ಯರ್ಥವಾಗಲು ಕೊಡಬಾರದು.

ದೇವರ ವಾಕ್ಯದಲ್ಲಿ ಹಂದಿಯನ್ನು ಅದರ ಜೊತೆಗೆ ನಾಯಿಯನ್ನು ಹೆಸರಿಸಲಾಗಿದೆ (2 ಪೇತ್ರ 2:22). ಅವು ಅಶುದ್ಧವಾದ ಪ್ರಾಣಿಗಳು (ಯಾಜಕಕಾಂಡ 11:7; ಧರ್ಮೋಪದೇಶಕಾಂಡ 14:8) ಮತ್ತು ಅವೆಲ್ಲವುಗಳು ಹೆಚ್ಚಾಗಿ ಅನ್ಯರು ಇರುವ ಪ್ರದೇಶಗಳಲ್ಲಿ ಕಂಡುಬರುತ್ತಿದ್ದವು (8:30-32; ಲೂಕ 15:15, 16). ಗೌರವವುಳ್ಳ ಯೆಹೂದ್ಯನು ಅವುಗಳನ್ನು ಮುಟ್ಟುವುದು ಸಹ ಇಲ್ಲ. ನಿಶಬ್ದಕಾಲದಲ್ಲಿ Seleucid tyrant Antiochus ರವರು ಹಂದಿಯನ್ನು ಬಲಿಯಾಗಿ ಅರ್ಪಿಸಿ ತಿನ್ನಲು ಯೆಹೂದ್ಯರನು ಒತ್ತಾಯ ಮಾಡಿದನು. ಹಾಗಿದ್ದರೂ, ಅವರು ಅಸಹ್ಯಕಾರ್ಯಮಾಡುವ ಬದಲಾಗಿ ಸಾಯಲು ಸಿದ್ಧರಾಗಿದ್ದರು.[9] ಯೆಹೂದ್ಯರು ಹಂದಿಗಳನ್ನು ಬೆಳಸಲಿಲ್ಲ, ಯೆಹೂದ್ಯರ ಪ್ರದೇಶದಲ್ಲಿರುವ ಹಂದಿಗಳು ಕಾಡಿಗೆ ಓಡಿಹೋಗುತ್ತಿದ್ದವು, ಬಿದಿ ಗುಡಿಸುವಂತೆ ಎಲ್ಲವನ್ನು ತಿಂದು ಹಾಕುತ್ತಿದ್ದವು (ಕೀರ್ತನೆ 80:13).

ಹೀನವಾದ ಪ್ರಾಣಿಗಳಾದ ಹಂದಿಗಳಿಗೆ, ಬೆಲೆಬಾಳುವ ಮುತ್ತುಗಳನ್ನು ಅವುಗಳ ಮುಂದೆ ಚೆಲ್ಲುವದು ಆಲೋಚನೆಗೆ ಮೀರಿದ್ದಾಗಿದೆ, ಪವಿತ್ರವಾದ ಆಹಾರವನ್ನು ನಾಯಿಗಳಿಗೆ ಕೊಡುವ ಮುಂದಿನ ಅಲಂಕಾರದೊಂದಿಗೆ, ಈ ಎರಡು ವಿಷಯಗಳು ಬಹಳ ಹೊಂದಿಕೆ ಇಲ್ಲದ್ದಾಗಿವೆ (ನೋಡಿರಿ ಜ್ಞಾನೋಕ್ತಿ 11:22). ಮುತ್ತುಗಳ ಮೌಲ್ಯವನ್ನು ತಿಳಿಯದೆಯಿರುವದರಿಂದ ಹಂದಿಗಳು ಕಾಲು ಕೆಳಗೆ ತುಳಿಯುತ್ತವೆ (ನೋಡಿರಿ 5:13; ಇಬ್ರಿಯ 10:29). ಕೆಲವೊಬ್ಬರು ಮುತ್ತುಗಳನ್ನು ಹಂದಿಗಳಿಗೆ ತಿನ್ನುಸಲು ಪ್ರಯತ್ನಿಸಿದರೆ, ಪ್ರಾಣಿಗಳು ಪ್ರತಿಕಾರಕ್ಕೆ ಮುಂದಾಗುತ್ತವೆ ಮತ್ತು ಆ ವ್ಯಕ್ತಿಯನ್ನು ಸೀಳಿಹಾಕಬಹುದು.

ಪುನಃ "ಪರಿಶುದ್ಧತೆ ಅಂದರೆ ಏನು" ಎಂಬುದರ ಕುರಿತಾಗಿ "ಮುತ್ತುಗಳು" ದೇವರ ರಾಜ್ಯದ ಶುಭವಾರ್ತೆಯನ್ನು ಸೂಚಿಸುತ್ತದೆ (ನೋಡಿರಿ 13:45, 46).[10] ನಾಯಿಗಳು ಮತ್ತು ಹಂದಿಗಳು, ಈ ಸನ್ನಿವೇಶದಲ್ಲಿ, ಅಧಾರ್ಮಿಕತೆಯನ್ನು ಪ್ರತಿನಿಧಿಸುತ್ತವೆ, ಆದರೆ ಅನ್ಯರನ್ನು ಪ್ರತಿನಿಧಿಸುವದಿಲ್ಲ. ಯಾರು ಸುವಾರ್ತೆಗೆ ವಿರುದ್ಧವಾಗಿದ್ದಾರೋ, ಯಾವುದೇ ದೇಶ,

ಜನಾಂಗದ ಬೇಧ ಭಾವವಿಲ್ಲದೆ ಅವರೆಲ್ಲರನ್ನು ಸೂಚಿಸುತ್ತದೆ. ಅವರು ಪರಿಶುದ್ಧತೆಗೆ ಅಗೌರವದಿಂದೆ ನಡೆದು ಕೊಳ್ಳುವದರಿಂದ ಆ ಸಂದೇಶಕ್ಕೆ ಯೋಗ್ಯರಲ್ಲ (ನೋಡಿರಿ ಜ್ಞಾನೋಕ್ತಿ 9:7-9; 23:9).

ಯೇಸು ತರುವಾಯ ತನ್ನ ಶಿಷ್ಯರಿಗೆ ಹೇಳಿದ್ದೇನೆಂದರೆ ಅವರು ಒಂದು ಊರು ನಗರ ಅಥವಾ ಮನೆಯಲ್ಲಿ ಹೋಗಿದ್ದರೆ ಅವರ ಸಂದೇಶವನ್ನು ನಿರಾಕರಿಸಿದರೆ, ಅವರು "ತಮ್ಮ ಕಾಲಿಗೆ ಹತ್ತಿದ ದೂಳನ್ನು ಜಾಡಿಸಬೇಕು" ಮತ್ತು ಅಲ್ಲಿಂದ ಇನ್ನೊಂದು ಊರಿಗೆ ನಗರಕ್ಕೆ ಅಥವಾ ಮನೆಗೆ ಹೋಗಿರಿ ಅಲ್ಲಿ ಬಹಳ ಮರ್ಯಾದೆ ಕೊಡುವ ಜನರನ್ನು ಕಂಡುಕೊಳ್ಳಬಹುದು (10:13, 14). ಪೌಲನು ನಂಬಲಾರದ ಯೆಹೂದ್ಯರಿಂದ ವಿರೋಧದ ಅನುಭವವನ್ನು ಹೊಂದಿದನೋ ಆಗ ಅವರನ್ನು ಬಿಟ್ಟುಬಿಡುತ್ತಿದ್ದನು ಮತ್ತು ಅತಿ ಶೀಘ್ರವಾಗಿ ಗ್ರಹಿಸಿಕೊಳ್ಳುವ ಅನ್ಯಜನರಿಗೆ ಸಂದೇಶವನ್ನು ಕೊಡುತ್ತಿದ್ದನು (ಅಪೊಸ್ತಲರ ಕೃತ್ಯಗಳು 13:45-52; 18:5-7; 28:23-28).

## ಪ್ರಾರ್ಥನೆಯಲ್ಲಿ ಸ್ಥಿರವಾಗಿ (7:7-11)

**7ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಹುಡುಕಿರಿ, ನಿಮಗೆ ಸಿಕ್ಕುವದು; ತಟ್ಟಿರಿ. ನಿಮಗೆ ತೆರೆಯುವದು; 8ಯಾಕೆಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು. ಹುಡುಕುವವನಿಗೆ ಸಿಕ್ಕುವದು, ತಟ್ಟುವವನಿಗೆ ತೆರೆಯುವದು. 9ನಿಮ್ಮಲ್ಲಿ ಯಾವನಾದರೂ ರೊಟ್ಟಿ ಕೇಳುವ ಮಗನಿಗೆ ಕಲ್ಲನ್ನು ಕೊಡುವನೇ? 10ಮೀನು ಕೇಳಿದರೆ ಹಾವನ್ನು ಕೊಡುವನೇ? 11ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವನಲ್ಲವೇ.**

ಆತನ ಪ್ರಸಂಗದಲ್ಲಿ ಮುಂದೆ ಚರ್ಚಿಸಿದ ಪ್ರಾರ್ಥಿಸುವ ವಿಷಯಕ್ಕೆ ಯೇಸು ಮತ್ತೆ ತಿರುಗಿ ಬಂದನು (6:5-15). ಆತನು ಪ್ರಾರ್ಥನೆಗೆ ಸಂಬಂಧಿಸಿದ ಮೂರು ಎಚ್ಚರಿಕೆಗಳೊಂದಿಗೆ ಪ್ರಾರಂಭಿಸಿದನು: "ಬೇಡಿಕೊಳ್ಳಿರಿ," "ಹುಡುಕಿರಿ," ಮತ್ತು "ತಟ್ಟಿರಿ" (7:7, 8). ತನ್ನ ಮಗನ "ರೊಟ್ಟಿ" ಮತ್ತು "ಮೀನು"ಗಳ ಕೋರಿಕೆಗೆ ತಂದೆಯ ಪ್ರತಿಕ್ರಿಯೆ ಒಳಗೊಂಡ ಎರಡು ಉದಾಹರಣೆಗಳನ್ನು ಈ ಅನುಮತ್ಯರ್ಥಗಳು ಹಿಂಬಾಲಿಸುತ್ತವೆ (7:9, 10). ಪರಲೋಕದ ತಂದೆಯ ಪ್ರೀತಿಯನ್ನು ಒತ್ತಿ ಹೇಳುವ ಕಡಿಮೆಯಿಂದ-ಶ್ರೇಷ್ಟತೆಯ ("ಇನ್ನೂ ಎಷ್ಟು ಹೆಚ್ಚಾಗಿ") ವಾಗ್ವಾದದೊಂದಿಗೆ ಆತನ ಪ್ರಾರ್ಥನೆಯ ಮೇಲಿನ ವ್ಯಾಖ್ಯಾನವು ಮುಕ್ತಾಯವಾಗುತ್ತದೆ.

**ವಚನಗಳು 7, 8.** ಮೂರು ಅನುಮತ್ಯರ್ಥಗಳೊಂದಿಗೆ ಪ್ರಾರ್ಥನೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತಿದ್ದಾನೆ. **ಬೇಡಿಕೊಳ್ಳಿರಿ** ಎನ್ನುವದು ಪ್ರಾರ್ಥನೆಗೆ ಸಾಮಾನ್ಯವಾದ ಸೂಚನೆಯಾಗಿದೆ (ನೋಡಿರಿ 21:22; ಮಾರ್ಕ 11:24; ಯೋಹಾನ 14:13, 14; 15:7, 16; 16:23, 24), ಅದರಂತೆಯೇ **ಹುಡುಕಿರಿ** ಮತ್ತು **ತಟ್ಟಿರಿ** ಎನ್ನುವಂಥದ್ದು ಅಲಂಕಾರಿಕವಾಗಿ ಉಪಯೋಗಿಸಲಾಗಿದೆ (ನೋಡಿರಿ ಪ್ರಕಟಣೆ 3:20).[11] 7ನೇ ವಚನದಲ್ಲಿ ವರ್ತಮಾನದ ಅನುಮತ್ಯರ್ಥ ಕ್ರಿಯಾಪದ ನಿರಂತರವಾಗಿ ನಡೆಯುವ ಕಾರ್ಯವನ್ನು ಸೂಚಿಸುತ್ತದೆ. JNTಯಲ್ಲಿ, "ಕೇಳುತ್ತಾ ಇರು" … "ಹುಡುಕುತ್ತಾ ಇರು" … "ತಟ್ಟುತ್ತಾ ಇರು" ಎಂದು ಅನುವಾದಿಸಲಾಗಿದೆ.

"ಹುಡುಕಿರಿ" ಮತ್ತು "ತಟ್ಟಿರಿ" ಎನ್ನುವ ಅಂಶಕ್ಕೆ ಸಂಬಂಧಿಸಿದ ಬಿಟ್ಟುಬಿಡದೆ ಪ್ರಾರ್ಥಿಸುವದರ ಕುರಿತ ಯೇಸುವಿನ ಎರಡು ಸಾಮ್ಯಗಳನ್ನು ಲೂಕನು ದಾಖಲಿಸಿದ್ದಾನೆ. ಲೂಕ 18:1-8ರಲ್ಲಿ ಒಬ್ಬ ವಿಧವೆ ಅನ್ಯಾಯವಾದ ನ್ಯಾಯಧಿಪತಿಯಿಂದ ನ್ಯಾಯವನ್ನು ಹುಡುಕುತ್ತ ಮತ್ತು ಅಂತಿಮವಾಗಿ ನಿರಂತರವಾಗಿ ಕೇಳಿದ್ದಕ್ಕೆ ನ್ಯಾಯವನ್ನು ಹೊಂದಿದಳು. ಲೂಕ 11:5-8ರಲ್ಲಿ ಒಬ್ಬ ಮನುಷ್ಯನು ತನ್ನ ಸ್ನೇಹಿತನ ಮನೆಗೆ ಮಧ್ಯ ರಾತ್ರಿಯಲ್ಲಿ ಬಂದು

ತನ್ನ ಅತಿಥಿಗಾಗಿ ರೊಟ್ಟಿಯನ್ನು ತೆಗೆದುಕೊಳ್ಳಲು ಬಂದನು. ಆತನು ಬಿಡದೆ ಕೇಳಿದ್ದರಿಂದ, ತನ್ನ ಸ್ನೇಹಿತನು ಹಾಸಿಗೆಯಿಂದ ಎದ್ದನು ಮತ್ತು ಆತನಿಗೆ ಅವಶ್ಯವಾದದ್ದನ್ನು ಕೊಟ್ಟನು.

ಯೇಸು ವಾಗ್ದಾನ ಮಾಡಿದನು, **ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಹುಡುಕಿರಿ, ನಿಮಗೆ ಸಿಕ್ಕುವದು; ತಟ್ಟಿರಿ. ನಿಮಗೆ ತೆರೆಯುವದು;** ದೇವರು ನಮ್ಮ ಪ್ರಾರ್ಥನೆ ಮನವಿಗಳನ್ನು ಅಲಕ್ಷ್ಯಮಾಡುವದಿಲ್ಲ ಇಲ್ಲವೆ ಅವುಗಳ ಕುರಿತು ಅಸಮಾಧಾನ ಹೊಂದುವದಿಲ್ಲ. ಆತನು ನಮಗೆ ಯಾವಾಗಲು ಬಾಗಿಲು ತೆಗೆದಿರುತ್ತಾನೆ ಮತ್ತು ನಮಗೆ ಬೇಕಾಗಿರುವದನ್ನು ಕೊಡದೆ ಆತನು ನಮ್ಮನ್ನು ಕಳಿಸುವದಿಲ್ಲ. ದೇವರು "ಅಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ" ಎಂದು ಯಾಕೋಬನು ಹೇಳುತ್ತಾನೆ (ಯಾಕೋಬ 1:5).

**ವಚನಗಳು 9, 10.** ಇನ್ನು ಎರಡು ಉದಾಹರಣೆಗಳು ಹೇಳಲಾಗಿದೆ (ಪ್ರಶ್ನಾರ್ಥಕವಾಗಿ ಹೇಳ ಲಾಗಿದೆ), ಅವುಗಳು ಭೂಲೋಕದ ತಂದೆ ತನ್ನ ಮಕ್ಕಳ ಕೋರಿಕೆಗೆ ಹೇಗೆ ಪ್ರತಿಕ್ರಿಯಿಸುತ್ತಾನೆ ಎಂದು ತೋರಿಸಲಾಗಿದೆ. ಮೊದಲು, **ನಿಮ್ಮಲ್ಲಿ ಯಾವನಾದರೂ ರೊಟ್ಟಿ ಕೇಳುವ ಮಗನಿಗೆ ಕಲ್ಲನ್ನು ಕೊಡುವನೇ?** ಎಂದು ಯೇಸು ಕೇಳಿದನು. ಈ ಪ್ರಶ್ನೆಗೆ "ಇಲ್ಲಾ!" ಎಂಬುವದು ಸ್ವಯಂವಿದಿತವಾದ ಉತ್ತರವಾಗಿದೆ. ಇಲ್ಲಿ "ರೊಟ್ಟಿ" ತುಂಡಿನ ("ರೊಟ್ಟಿ"; NIVಯಲ್ಲಿ ಅನುವಾದ) ಮತ್ತು "ಕಲ್ಲಿನ" ಗುಂಡಿನ ಆಕಾರಗಳು ಇವೆರಡಕ್ಕೂ ಸಂಪರ್ಕ ಕೊಡುತ್ತದೆ. ಯೇಸು ಅಡವಿಯಲ್ಲಿ ಮೊದಲ ಬಾರಿಗೆ ಶೋಧನೆಗೆ ಒಳಗಾದಗ ಸೈತಾನನಿಂದ ಕಲ್ಲನ್ನು ರೊಟ್ಟಿ ಯನ್ನಾಗಿ ಮಾಡುವಂತೆ ಒತ್ತಾಯ ಮಾಡಿದ್ದರಿಂದ ಈ ಹೋಲಿಕೆಯನ್ನು ಸೂಚಿಸಬಹುದು (4:3).

ಯೇಸು ಪುನರಾವರ್ತನೆಯನ್ನು ಉಪಯೋಗಿಸಿ, ಅದೇ ರೀತಿಯ ಪ್ರಶ್ನೆ ಕೇಳಿದನು: **ಮೀನು ಕೇಳಿದರೆ ಹಾವನ್ನು ಕೊಡುವನೇ?** ಪುನಃ, ಅದಕ್ಕೆ "ಇಲ್ಲಾ!" ಎನ್ನುವ ಉತ್ತರ ಪ್ರತಿಧ್ವನಿಸುತ್ತದೆ. ಸಾಮಾನ್ಯವಾಗಿ ಈ ವಾಕ್ಯಭಾಗವನ್ನು ಓದುವಾಗ ವಿಷವುಳ್ಳ ಹಾವು ಮಕ್ಕಳಿಗೆ ಗಾಯಮಾಡುವ ಅಥವಾ ಸಾಯಿಸಿ ಬಿಡುವ ಸಂಭವವಿರುತ್ತದೆ ಎಂಬುದು ಮನಸ್ಸಿಗೆ ಬರುವದು - ಇದು ಸರಿಯಾಗಿರಬಹುದು. ಇದಲ್ಲದರ ತರುವಾಯ, *ophis* ಎಂಬ ಶಬ್ದ ಹೊಸ ಒಡಂಬಡಿಕೆಯಲ್ಲಿ ಹಾವುಗಳನ್ನು ಸೂಚಿಸಲು ಉಪಯೋಗಿಸಲಾಗಿದೆ (ಮಾರ್ಕ 16:18; 1 ಕೊರಿಂಥ 10:9). ಹಾಗಿದ್ದರೂ, ಇಲ್ಲಿ ಬಹುಶಃ ಗಲಿಲಾಯ ಸಮುದ್ರದಲ್ಲಿ ಸಿಗುವ ನೀರು ಹಾವನ್ನು ಸೂಚಿಸುವ ಮತ್ತೊಂದು ಸಾಧ್ಯತೆಯಿದೆ.[12] ಆದಿ ಕಾಲದ ಸಂಸ್ಕೃತಿಯಲ್ಲಿ ಹಾವಿನಂತಿರುವ-ಮೀನನ್ನು ಹಾವೆಂದು ಗುರುತಿಸುವದು ಸಾಮಾನ್ಯವಾಗಿತ್ತು[13] ಎಂದು Edwin Firmage ರವರು ವಾದಿಸುತ್ತಾರೆ. ಈ ವಿಷಯದಲ್ಲಿ ಹಾವು ಮೇಲೆ ತಿಳಿಸಿರುವ ಕಲ್ಲನ್ನು ಸೂಚಿಸುತ್ತದೆ - ಅದು ತಿನ್ನುದಕ್ಕೆ ಆಗುವದಿಲ್ಲ. ರೆಕ್ಕೆ ಮತ್ತು ಪರಪರೆಯಾದ ಮೈಯೂ (ಚಿಪ್ಪು) ಹೊಂದಿರುವಂಥ ಮೀನನ್ನು ಯೆಹೂದ್ಯರು ತಿನ್ನುವದು ಯಾಜಕಕಾಂಡ 11:9-12 ನಿಷೇಧಿ ಸುತ್ತದೆ.

ಹೆಚ್ಚಿನ ಜನಸಾಂದ್ರತೆಯುಳ್ಳ ಗಲಿಲಾಯ ಸಮುದ್ರದ ಸುತ್ತಾಮುತ್ತಾ ಜನರು ಸಾಮಾನ್ಯ ವಾದ ಆಹಾರವನ್ನಾಗಿ ರೊಟ್ಟಿ ಮತ್ತು ಮೀನನ್ನು ತಿನ್ನುತ್ತಿದ್ದರು. ಯೇಸು ಅದ್ಭುತವಾಗಿ ಐದು ಸಾವಿರ ಜನರಿಗೆ ಮತ್ತು ನಾಲ್ಕು ಸಾವಿರ ಜನರಿಗೆ ಊಟಮಾಡಿಸುವಾಗ ರೊಟ್ಟಿ ಮತ್ತು ಮೀನಿನಿಂದ ಕೂಡಿತ್ತು (14:15-21; 15:32-38). "ತತ್ತಿಯನ್ನು ಕೇಳಿದರೆ ಚೇಳನ್ನು ಕೊಡುವನೇ?" ಎಂದು ಯೇಸು ಹೇಳಿದ್ದನ್ನು ಲೂಕನು ಸೇರಿಸಿದ್ದಾನೆ (ಲೂಕ 11:12). ಚೇಳುಗಳು ಅಶುದ್ಧ ಜೀವಿಗಳ "ಸಣ್ಣ ಜಂತುಗಳ ಗುಂಪಿಗೆ" (ಯಾಜಕಕಾಂಡ 11:29-31) ಸೇರಿವೆ, ಮತ್ತು ಆ ಆಧಾರದ ಮೇಲೆಯೆ ಅವುಗಳನ್ನು ಆಹಾರವಾಗಿ ತಿನ್ನುವದು ನಿಷೇಧಿ ಸಲಾಗಿದೆ. ಅನೇಕ ವಿಧದ ಚೇಳುಗಳು ಬಿರುಸು ಹೊದಿಕೆ ಮೇಲ್ಭಾಗದಲ್ಲಿ ಹೊಂದಿರುತ್ತವೆ ಮತ್ತು ಅವುಗಳು ಸುರಳಿಯಂತೆ ಸುತ್ತಿಕೊಂಡು ಮಲಗುವಾಗ ಮೊಟ್ಟೆಗಳಂತೆ ಕಾಣಿಸಿಕೊಳ್ಳುತ್ತವೆ. ಕೆಲವೊಬ್ಬರು ತಪ್ಪಾಗಿ ತಿಳಿದುಕೊಂಡು ಇಂಥಹಾ ಮೊಟ್ಟೆಗಳನ್ನು ತೆಗೆದುಕೊಂಡು ಮತ್ತು

ತಿನ್ನುವದಕ್ಕೆ ಸಿದ್ಧತೆ ಮಾಡಿಕೊಂಡರೆ, ಅವರು ಗಂಭೀರವಾಗಿ ಅಸೌಖ್ಯ ಹೊಂದುತ್ತಾರೆ.

**ವಚನ 11.** ಅದರ ಮುಕ್ತಾಯವನ್ನು ಯೇಸು ಸ್ಪಷ್ಟವಾದ ಮತ್ತು ಬಲವಾದ ರೀತಿಯಲ್ಲಿ ಮಾಡಿದನು: **ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವನಲ್ಲವೇ.** ಯೇಸು ಆಳಿನಿಂದ ಅರಸನಿಗೆ ಎನ್ನುವ ವಾದವನ್ನು ಉಪಯೋಗಿಸಿಕೊಂಡು ದೇವರು ಯಾವಾಗಲು ತನ್ನ ಜನರಿಗೆ ಉದಾರತೆಯಿಂದ ಇರುತ್ತಾನೆ ಎನ್ನುವದನ್ನು ತೋರಿಸಿದ್ದಾನೆ. ಹಾಗೆ ಮಾಡುವದರ ಮೂಲಕ, ತನ್ನ ಕೇಳುಗರಿಗೆ "ಕೆಟ್ಟವರು" ಎಂದು (*ponēros*) ಸೂಚಿಸುತ್ತಾನೆ. ಈ ಶಬ್ದವು ಪ್ರಸಂಗದಲ್ಲಿ ಎಂಟು ಸಾರಿ ಕಾಣಿಸುತ್ತದೆ (5:11, 37, 39, 45; 6:13, 23; 7:17, 18), ಇಲ್ಲಿ ಆತನು ಸಂಪೂರ್ಣವಾದ "ಒಳ್ಳೆಯವನಾದ" ದೇವರಿಗೆ ಹೋಲಿಸಿದ್ದಾನೆ (19:17; ನೋಡಿರಿ 5:48). ಯಾವಾಗ ದೇವರಿಗೆ ಹೋಲಿಸುತ್ತೇವೋ, ಅಲ್ಲಿ ಒಳ್ಳೆಯ ತಂದೆ ತಾಯಿಯರನ್ನು ದುಷ್ಟರು ಎಂದು ತೋರಿಸಲಾಗಿದೆ.[14]

ಯಾವುದೇ ತಂದೆತಾಯಿಗಳು ತನ್ನ ಮಕ್ಕಳನ್ನು ಕ್ರೂರವಾಗಿ ನಡಿಸಿಕೊಂಡು ರೊಟ್ಟಿ ಮತ್ತು ಮೀನು ಕೇಳುವಾಗ ಕಲ್ಲು ಅಥವಾ ಹಾವನ್ನು ಕೊಡುವದಿಲ್ಲ. ಒಳ್ಳೆಯ ತಂದೆ ತಾಯಿಯವರು ತಮ್ಮ ಮಕ್ಕಳಿಗೆ ಒಳ್ಳೆಯದನ್ನೇ ಬಯಸುತ್ತಾರೆ. ಮನುಕುಲದ ತಂದೆ ತಾಯಿಗಳೆ ತಮ್ಮ ಮಕ್ಕಳ ಅವಶ್ಯಕತೆಗಳನ್ನು ಪೂರೈಸುವಾಗ, ಪರಲೋಕದ ತಂದೆಯು ತನ್ನ ಮಕ್ಕಳ ಅಗತ್ಯತೆಗಳನ್ನು ಪೂರೈಸುವನೆಂದು ನಮಗೆ ಗೊತ್ತಿದೆ (ಫಿಲಿಪ್ಪಿ 4:19; ಯಾಕೋಬ 1:17; 1 ಪೇತ್ರ 3:12; 5:7; 1 ಯೋಹಾನ 5:14, 15). ತನ್ನ ಮಕ್ಕಳನ್ನು ಆಶೀರ್ವದಿಸಬೇಕೆಂದು ದೇವರು ಬಯಸುತ್ತಾನೆ. ಯಾರು ನಂಬಿಕೆಯಿಂದ ಮತ್ತು ಆತನ ಚಿತ್ತದ ಪ್ರಕಾರ ಕೇಳುವರೋ ಅವರಿಗೆ ಕೊಡಲು ದೇವರು ಬಯಸುತ್ತಾನೆ ಅದಕ್ಕೆ ಯಾವುದೇ ಪರಿಮಿತಿ ಇಲ್ಲವೆಂದು ದೇವರ ವಾಕ್ಯ ಹೇಳುತ್ತದೆ.

ಯೇಸುವಿನ ಈ ಮಾನವಿಯತೆಯ ಉದಾಹರಣೆಗಳು (ರೊಟ್ಟಿ ಮತ್ತು ಮೀನು) ಶಾರೀರಿಕ ವಿಷಯಕ್ಕೆ ಸಂಬಂಧಪಟ್ಟವುಗಳು, ದೈಹಿಕಕ್ಕೆ ಸಂಬಂಧಪಟ್ಟಂತೆ, "ಒಳ್ಳೆಯದು ಅಂದರೆ ಏನು" ಎನ್ನುವದು ವಿವರಿಸುವದು ಸುಲಭವಾಗಿದೆ. ಹಾಗಿದ್ದರೂ, ದೇವರು ತನ್ನ ಮಕ್ಕಳಿಗೆ ಶಾರೀರಿಕವಾದ ಅವಶ್ಯಕತೆಗಳನ್ನು ಪೂರೈಸುವನು (6:33), ಆತನು ವಿಶೇಷವಾಗಿ ಅವರ ಆತ್ಮೀಕ ಅಗತ್ಯತೆಯನ್ನು ಪೂರೈಸುವನು. "ಒಳ್ಳೆಯದು ಅಂದರೆ ಏನು" ಎನ್ನುವದರ ಬದಲಾಗಿ ಲೂಕ 11:13ರಲ್ಲಿ "ಪರಿಶುದ್ಧಾತ್ಮನು" ಎಂದು ಬರೆಯಲಾಗಿದೆ. ಈ ಪ್ರಸಂಗದಲ್ಲಿರುವ ಸವಾಲಿನಿಂದ ಕೂಡಿದ ಬೋಧನೆಗಳನ್ನು ನೆರವೇರಿಸಲು ಶಿಷ್ಯರ ಬೇಡಿಕೊಳ್ಳುವಿಕೆ, ಹುಡುಕುವಿಕೆ, ಮತ್ತು ತಟ್ಟುವಿಕೆಗಳು ವಿಶೇಷ ಆತ್ಮೀಕ ಬಲಕ್ಕೆ ಸಂಬಂಧಿಸಿವೆ (ನೋಡಿರಿ ರೋಮಾಪುರ 8).

## ಸಾರಾಂಶ:

## ಒಂದು ಬಂಗಾರದ ನಿಯಮ (7:12)

**[12]ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಆಪೇಕ್ಷಿಸುತ್ತಿರೋ ಅದನ್ನೇ ನೀವು ಅವರಿಗೆ ಮಾಡಿರಿ. ಇದೇ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ.**

**ವಚನ 12.** ಹಿಂದೆ ಹೇಳಿದಂತಹವುಗಳಿಗೆ ಒಂದು ರೀತಿಯ ಸಾರಾಂಶವಾಗಿ, ಯೇಸು ಇತರರೊಂದಿಗೆ ವ್ಯವರಿಸುವಾಗ ಅನುಸರಿಸಬೇಕಾದ "ಒಂದು ಬಂಗಾರದ ನಿಯಮವೆಂದು" ಕರೆಯಲ್ಪಟ್ಟ ಮಾರ್ಗ ಸೂಚನೆಗಳನ್ನು ಕೊಟ್ಟಿದ್ದಾನೆ. ಮನುಷ್ಯರಿಗೆ ಎಂದಿಗೂ ಕೊಡದಂತಹ ಸರ್ವಶ್ರೇಷ್ಟವಾದ ನೀತಿ ಸೂತ್ರಗಳೆಂದು ಅವಿಶ್ವಾಸಿಗಳಿಂದ ಸಹ ಈ ಸೂತ್ರಗಳು

ಗುರುತಿಸಲ್ಪಟ್ಟಿವೆ. ಏಷೀಯಾ, ಗ್ರೀಕ್ - ರೋಮನ್ ಮತ್ತು ಯೆಹೂದ್ಯ ಹಿನ್ನಲೆಯಿರುವ ಸಂತರು ಮತ್ತು ತತ್ವಜ್ಞಾನಿಗಳು ಸಹ ಅಂಥಹಾ ಬುದ್ಧಿವಾದದ ಎಚ್ಚರಿಕೆಗಳನ್ನು ಕೊಟ್ಟಿದ್ದಾರೆ. ಹಾಗಿದ್ದರೂ ಸಹ, ಅವರಲ್ಲಿಯ ಹೆಚ್ಚಿನ ನಿಯಮಗಳು ನಕರಾತ್ಮಕವಾಗಿಯೇ ಹೇಳಲಾಗಿದೆ.

ಚೈನಾ ದೇಶದ ತತ್ವಜ್ಞಾನಿಯಾದ Confucius ಹೀಗೆ ಹೇಳಿದ್ದಾನೆ, "ನಿನಗೆ ನೀನು ಏನು ಮಾಡಿಕೊಳ್ಳಬಾರದೆಂದುಕೊಳ್ಳುತ್ತಿಯೋ, ಅದನ್ನೆ ಇತರರಿಗೆ ಮಾಡಬೇಡ."[15] ಗ್ರೀಕ್ ತತ್ವಜ್ಞಾನಿಯಾದ Isocrates ವಿಶ್ಲೇಷಿಸಿದ್ದಾರೆ, "ಇತರರ ಕೈಯಿಂದ ಏನೆಲ್ಲಾ ಕೋಪಗಳಿಂದ ನೀನು ಸಂಕಷ್ಟಗಳನ್ನು ಅನುಭವಿಸಿರುತ್ತಿಯೋ ಅಂಥಹ ಕೋಪವು ಇತರರಿಗೆ ಮಾಡಬೇಡ."[16] ಗ್ರೀಕ್ ತತ್ವಜ್ಞಾನಿಯಾದ Aristotle ಹೇಳಿದ್ದು, "ಅವರು ಹೇಗೆ ನಮ್ಮೊಂದಿಗೆ ವರ್ತಿಸಬೇಕೆಂದು ನಾವು ಅಂದು ಕೊಳ್ಳುತ್ತೇವೋ ಹಾಗೆಯೇ ನಾವು ವರ್ತಿಸಬೇಕು."[17] Rabbi Hillel ರವರು ಅನ್ಯ ಮತಾಂತರ ಹೊಂದಿದವನು ವರದಿಸಲ್ಲಿಸಿದಂತೆ, "ನಿನಗೆ ಏನು ದ್ವೇಷ ಉಂಟಾಗಿದೆಯೋ, ಅದನ್ನು ನಿನ್ನ ನೆರಯವನಿಗೆ ಮಾಡಬೇಡ."[18] ಅಪ್ರಮಾಣಿಕ ಗ್ರಂಥವಾಗಿರುವ Tobit ಪುಸ್ತಕದಲ್ಲಿ ಹೀಗೆ ಸಲಹೆ ಕೊಡಲಾಗಿದೆ, "ಮತ್ತು ನೀನು ದ್ವೇಷಿಸುವದನ್ನು ಯಾರಿಗೂ ನೀನು ಹಾಗೆ ಮಾಡಬೇಡ."[19] Sirach ಪುಸ್ತಕ ಹೇಳುತ್ತದೆ, "ನಿನ್ನ ನೆರೆಯವನ ಅನಿಸಿಕೆಗಳನ್ನು ನಿನ್ನ ಸ್ವಂತ ಅನಿಸಿಕೆಯಿಂದ ತೀರ್ಪುಮಾಡು ಮತ್ತು ಪ್ರತಿಯೊಂದು ವಿಷಯದಲ್ಲಿ ಆಲೋಚನೆಯುಳ್ಳವನಾಗಿರು."[20] Aristeas ಪತ್ರಿಕೆ ಹೀಗೆ ಹೇಳುತ್ತದೆ, "ಇಲ್ಲಿಯವರೆಗೂ ನೀನು ಕೆಟ್ಟ ವಿಷಯವು ನಿನ್ನ ಮೇಲೆ ಬರುವಂತೆ ಆಶಿಸಲಿಲ್ಲ, ನೀನು ನಿನ್ನ ನೆರೆಯವರೊಂದಿಗೆ ಇದನ್ನು ಅಭ್ಯಾಸದಲ್ಲಿ ಇಟ್ಟುಕೊಂಡರೆ ಆಶೀರ್ವಾದಕ್ಕಾಗಿ (ಇದು ಬುದ್ಧಿಯುಳ್ಳದ್ದಾಗಿರುತ್ತದೆ) ಆಶಿಸಬೇಕು."[21]

ಯೇಸು ಹೇಳಿರುವ ಎಚ್ಚರಿಕೆ ಒಳ್ಳೆಯದ್ದಾಗಿದೆ, ಮತ್ತು ಇದರ ಕಾರ್ಯಗಳು ಯಾವುದೇ ಒಂದು ಗುಂಪಿಗೆ ಸೀಮಿತವಲ್ಲ (ಒಬ್ಬ ಸ್ನೇಹಿತರಿಗೆ ಆಗಿರುವಂತೆ): **ಜನರು ನಿಮಗೆ ಏನೇನು ಮಾಡಬೇಕೆಂದು ಆಪೇಕ್ಷಿಸುತ್ತಿರೋ ಅದನ್ನೇ ನೀವು ಅವರಿಗೆ ಮಾಡಿರಿ.**[22] ಇದನ್ನು ಯೇಸು ನಕರಾತ್ಮಕವಾಗಿ ಹೇಳಿದ್ದಿಯಾದರೆ, "ಸರ್ವಶ್ರೇಷ್ಟ ನಿಯಮವು ಏನು ಮಾಡದೆ ತೃಪ್ತಿಕರವಾಗಿರುತಿತ್ತು. ಸಕರಾತ್ಮಕವಾದದ್ದು ಇತರರ ಪರವಾಗಿ ನಮ್ಮನ್ನು ಒಳ್ಳೆಯ ತನಕ್ಕೆ ಮುಂದೆ ಹೋಗಲು ಪ್ರೋತ್ಸಾಹಿಸುತ್ತದೆ: ಇತರರು ನಮಗೆ ಉತ್ತಮವಾದದ್ದನ್ನು ಮಾಡಬೇಕೆಂದು ಆಪೇಕ್ಷಿಸಿದಂತೆಯೇ ನಾವು ಉತ್ತಮವಾಗಿರುವದನ್ನು ಅವರಿಗೆ ಮಾಡಬೇಕು."[23] Jack P. Lewis ಹೇಳಿದ್ದಾನೆ, "ನಿಯಮದ ಉತ್ತಮವಾದ ರಚನೆಯು ಮನುಷ್ಯನ ಕಾರ್ಯಗಳು [ಒಳ್ಳೆಯ] ಸಮಾರ್ಯದವನ ಕಾರ್ಯಕ್ಕೆ ಹೋಲಿಕೆಯಾಗಿದೆ (ಲೂಕ 10:30ff)."[24]

ಬಂಗಾರದ ನಿಯಮ ಯೇಸು ಹೇಳುವಾಗ, ಆತನು ಒಂದು ಹೊಸ ನಿಯಮವನ್ನು ಪುನ ರಾವರ್ತನೆಯಾಗಿ ಹೇಳುತ್ತಾ ಇಲ್ಲ ಆತನು ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ಸಾರಾಂಶವನ್ನು ಹೇಳುತ್ತಾ ಇದ್ದಾನೆ (ಧರ್ಮೋಪದೇಶಕಾಂಡ 6:5). ತರುವಾಯ, ಆತನು ಹಳೆ ಒಡಂಬಡಿಕೆಗೆ ಸರಿಸಮಾನತೆಯಾಗಿರುವ ಆಜ್ಞೆ "ನಿಮ್ಮ ದೇವರಾದ ಯೆಹೋವನನ್ನು ಪ್ರೀತಿಸಬೇಕು" (ಯಾಜಕಕಾಂಡ 19:18) ಎಂದು ಹೇಳಿದ್ದಾನೆ. "ಈ ಎರಡು ಆಜ್ಞೆಗಳು ಸಂಪೂರ್ಣ ಧರ್ಮಶಾಸ್ತ್ರ ಮತ್ತು ಪ್ರವಾದಿಗಳನ್ನು ಅವಲಂಭನೆಗೊಂಡಿದೆ" (22:40) ಎಂದು ಆತನು ಹೇಳಿ ದ್ದಾನೆ. Rabbi Hillel ಅವರು ಬಂಗಾರದ ಈ ನಿಯಮದ ಹೇಳಿಕೆ ಹೇಳಿದ ಮೇಲೆ ಅದನ್ನು ಮುಂದುವರಿಸಿ, "ಇದು ಪೂರ್ಣ ಧರ್ಮಶಾಸ್ತ್ರ ಮತ್ತು ಉಳಿದದ್ದೆಲ್ಲವು ವ್ಯಾಖ್ಯಾನವಾಗಿದೆ."[25] ಇದನ್ನು ನಾವು ಗಮನಿಸಬೇಕು ಬಂಗಾರದ ನಿಯಮದಂತೆಯೇ ಯೇಸು ಅದಕ್ಕೆ ಸರಿಸಮವಾಗಿರುವ ಆಜ್ಞೆಯನ್ನು "ನಿಮ್ಮ ನೆರೆಯವರನ್ನು ನಿಮ್ಮಂತೆಯೇ ಪ್ರೀತಿಸಬೇಕು" ಎನ್ನುವದನ್ನು ಕೊಟ್ಟನು (ನೋಡಿರಿ ರೋಮಾಪುರ 13:8-10; ಗಲಾತ್ಯ 5:14).

**ಆದುದರಿಂದ** ಎಂದು ಪರಿಚಯಿಸಿದ 12ನೇ ವಚನವು ಪರ್ವತ ಪ್ರಸಂಗದ ಸಾರಾಂಶ

ದಂತೆ ಕೆಲಸ ಮಾಡುತ್ತದೆ. ಧರ್ಮಶಾಸ್ತ್ರ ಮತ್ತು ಯೇಸುವಿನ ಬೋಧನೆಗಳನ್ನು ಬಂಗಾರದ ನಿಯಮದ ಸೂಕ್ಷ್ಮ ನೋಟಗಳ ಮುಖಾಂತರ ಅವಲೋಕನ ಮಾಡಬೇಕು. "ಧರ್ಮಶಾಸ್ತ್ರ ಮತ್ತು ಪ್ರವಾದಿಗಳು" ಎಂಬ ಪದಗುಚ್ಛವು 5:17ರಲ್ಲಿರುವ "ಧರ್ಮಶಾಸ್ತ್ರ ಅಥವಾ ಪ್ರವಾದಿಗಳು" ಎನ್ನುವದಕ್ಕೆ ಸರಿಸಮಾರ್ಥವಾಗಿದೆ. ಈ ಪ್ರಸಂಗದ ಮುಖ್ಯ ರಚನೆಗೆ ಈ ಆಧಾರ ವಾಕ್ಯಗಳು ಆವರಣದಲ್ಲಿ ಇಟ್ಟಿರುವಂತೆ ಕಾರ್ಯಮಾಡುತ್ತವೆ (5:17-7:12).

## ಅಂತಿಮ ಎಚ್ಚರಿಕೆಗಳು (7:13-27)

ಈ ಪುಸ್ತಕದ ಮುಕ್ತಾಯದಲ್ಲಿ, ಯೇಸು ತನ್ನ ಶಿಷ್ಯರಿಗೆ ಆತನ ಬೋಧನೆಗೆ ವಿಧೇಯರಾಗ ಬೇಕೆಂದು ಎಚ್ಚರಿಸಿದನು. ಅವರ ಮುಂದೆ ಅನೇಕ ಭಿನ್ನವಾದ ವಿಷಯಗಳನಿಟ್ಟು ಅವುಗಳನ್ನು ಆಯ್ಕೆ ಮಾಡುವದಕ್ಕೆ ಏರ್ಪಡಿಸಿದನು: ಎರಡು ಬೇರೆ ಬೇರೆ ಮಾರ್ಗಗಳು (7:13, 14), ಎರಡು ವಿಧದ ಮರಗಳು (7:15-20), ಎರಡು ರೀತಿಯ ಹಿಂಬಾಲಕರು (7:21-23) ಮತ್ತು ಎರಡು ಬಗೆಯ ಕಟ್ಟುವವರು (7:24-27). R. T. France ರವರು ಹೀಗೆ ಬರೆದಿದ್ದಾರೆ, "ಪ್ರತಿಯೊಂದು ಹೇಳಿಕೆಯು ಅದು ನಿಜವಾದ ಮತ್ತು ನಕಲಿಯ ಭಿನ್ನತೆಯನ್ನು ಹೇಳುತ್ತದೆ, ಮತ್ತು ಈ ನಿಜತ್ವ ಗುಣವು ಶಿಷ್ಯನ ವೃತ್ತಿಯಲ್ಲಿ ಕಂಡುಬರುವದಿಲ್ಲ ಆದರೆ ಅದು ಆತನ ಕಾರ್ಯಚರಣೆಯಲ್ಲಿ ಕಂಡುಬರುತ್ತದೆ."[26] ಸರಿಯಾದ ಪ್ರತಿಕ್ರಿಯೆ ನೀಡಲು ಅದು ಒತ್ತಾಯ ಮಾಡುತ್ತದೆ. *Poieō,* ಎಂಬ ಗ್ರೀಕ್ ಕ್ರಿಯಾಪದ ಸಾಮಾನ್ಯವಾಗಿ "ತಯಾರಿಸು" ಅಥವಾ "ಮಾಡು" ಎಂದು ಭಾಷಾಂತರ ಮಾಡಲಾಗಿದೆ, ಅದು ವಿಧೇಯತೆಗೆ ಸಂಬಂಧಿಸಿ ಈ ಭಾಗದಲ್ಲಿ ಒಂಭತ್ತು ಸಾರಿ ಕಾಣಿಸುತ್ತದೆ.

### ಎರಡು ಭಿನ್ನವಾದ ಮಾರ್ಗಗಳು (7:13, 14)

**13ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗಿರಿ, ನಾಶಕ್ಕೆ ಹೋಗುವ ಬಾಗಲು ದೊಡ್ಡದು, ದಾರಿ ಅಗಲವು; ಅದರಲ್ಲಿ ಹೋಗುವವರು ಬಹು ಜನ. 14ನಿತ್ಯ ಜೀವಕ್ಕೆ ಹೋಗುವ ಬಾಗಲು ಇಕ್ಕಟ್ಟು, ದಾರಿ ಬಿಕ್ಕಟ್ಟು; ಅದನ್ನು ಕಂಡುಹಿಡಿಯುವವರು ಸ್ವಲ್ಪ ಜನ.**

**ವಚನಗಳು 13, 14.** ಯೇಸು ತನ್ನ ಶಿಷ್ಯರಿಗೆ **ಇಕ್ಕಟ್ಟಾದ ಬಾಗಿಲಿನಿಂದ** ಪ್ರವೇಶಿಸಲು ಒತ್ತಾಯ ಮಾಡುತ್ತಾನೆ. "ಇಕ್ಕಟ್ಟಾದ" (*stenos*) ಗ್ರೀಕ್ ಶಬ್ದಕ್ಕೆ "ಅತಿಯಾದ ಕಷ್ಟಕರ" ಎಂಬುದು "ಒಂದು ಚಿಕ್ಕ ಕನ್ನದೊಳಗೆ ಬಲವಂತವಾಗಿ ತುರುಕುವ" ಸ್ಥಿತಿಯನ್ನು ಸೂಚಿಸುತ್ತದೆ. ಮುಚ್ಚಿದ ಬಾಗಿಲಿನ ಸಾಮ್ಯವನ್ನು ಚರ್ಚಿಸುತ್ತಾ ಯೇಸು ಹೀಗೆ ಹೇಳಿದ್ದಾನೆ, "ಇಕ್ಕಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗುವದಕ್ಕೆ ಹೆಣಗಾಡಿರಿ. ಬಹುಜನ ಒಳಕ್ಕೆ ಹೋಗುವದಕ್ಕೆ ನೋಡುವರು, ಆದರೆ ಅವರಿಂದಾಗುವದಿಲ್ಲ ಎಂದು ನಿಮಗೆ ಹೇಳುತ್ತೇನೆ" (ಲೂಕ 13:24). "ಹೆಣಗಾಡಿರಿ" (*agōnizomai*) ಎಂಬ ಗ್ರೀಕ್ ಪದವು "ಸಂಕಟಪಡು" (agonize) ಮತ್ತು "ವೇದನೆ" (anguish) ಎಂಬ ಪದಗಳಿಗೆ ಮೂಲವಾಗಿದೆ. ಪರಲೋಕಕ್ಕೆ ಪ್ರವೇಶಿಸಲು ಬಹಳಷ್ಟು ಶ್ರಮೆ ಬೇಕು ಎಂದು ಇದರ ಅಂತರಾರ್ಥವಾಗಿದೆ (ನೋಡಿರಿ 5:20; 19:24).

ಇಲ್ಲಿ **ಪ್ರವೇಶಿಸು** ಎನ್ನುವದಕ್ಕೆ *eiselthate* ಎಂಬ ಗ್ರೀಕ್ ಶಬ್ದವು ಉಪಯೋಗಿಸಲಾಗಿದೆ ಇದು ಅನಿಶ್ಚಿತ ವಿಧಿರೂಪಕದಲ್ಲಿದೆ, ಇದು ನಿರ್ದಿಷ್ಟವಾದ ಕಾರ್ಯ ಮಾಡಲು ಬೇಡುತ್ತದೆ; ಇದು ಒಂದು ಆಜ್ಞೆಯಾಗಿದೆ. ಯೇಸು ಈ ಮಾತುಗಳನ್ನಾಡುವಾಗ, ಅವುಗಳು ಎಚ್ಚರಿಕೆ ಎಂದು ಅರ್ಥೈಸಲಿಲ್ಲ, ಆದರೆ ಅವುಗಳನ್ನು ಬುದ್ಧಿಹೇಳಿಕೆಗಳು ಅಥವಾ ಆಹ್ವಾನ ಎಂದು ಅರ್ಥಮಾಡಿಕೊಂಡರು. ಆತನು ತನ್ನಲ್ಲಿಗೆ ಬರುವವರನ್ನು ಸ್ವಾಗತ ಮಾಡಿದನು.

ಯಾರು ಈ ಇಕ್ಕಟ್ಟಾದ ಬಾಗಿಲಿನಿಂದ ಪ್ರವೇಶಿಸುವವರೋ ಅವರು **ಇಕ್ಕಟ್ಟಾದ**

**ದಾರಿ**ಯಲ್ಲಿಯೇ ಪ್ರಯಾಣಿಸುವರು. "ಇಕ್ಕಟ್ಟು" (*thlibō*) ಎಂಬ ಗ್ರೀಕ್ ಕ್ರಿಯಾಪದ "ಒತ್ತು," "ನಿರ್ಬಂಧಿಸು," ಮತ್ತು "ತೊಂದರೆ ಕೊಡು," ಎಂದರ್ಥ. ಯೇಸುವಿನ ಶಿಷ್ಯರು ಪ್ರಯಾಣದ ಮಾರ್ಗವು ಅದು ಕಷ್ಟಗಳಿಂದ ತುಂಬಿತ್ತು, ಹೋರಾಟಗಳು, ಮತ್ತು ಹಿಂಸೆಗಳು ಸಹ ತುಂಬಿದ್ದವು. ಪಾಲೇಸ್ತೀನ ದೇಶದ ಅಂಥಹಾ ದಿನ ರಸ್ತೆಗಳು ಯೇಸುವಿನ ಅಲಂಕಾರ ನಿರೂಪಣೆಗೆ ಹಿನ್ನಲೆಯಾಗಿ ಕೆಲಸಮಾಡಿವೆ. Robert H. Gundry ಗಮನಿಸಿ ಹೀಗೆ ಹೇಳಿದ್ದಾರೆ, "ಸಮತಲವಾದ ದೇಶಗಳು ವಿಶಾಲವಾದ ರಸ್ತೆಗಳು ಹೊಂದಿರುತ್ತವೆ ಆದರೆ ಬೆಟ್ಟಗುಡ್ಡಗಳ ಭಾಗವು ನಿರ್ಬಂಧಿತವಾದ ರಸ್ತೆಗಳನ್ನು ಮಾಡಿ ಅದರಲ್ಲಿ ಪ್ರಯಾಣಿಸುವದು ಕಷ್ಟಕರವಾಗಿದೆ."[27]

ಯೇಸುವಿನ ಅಲಂಕಾರ ನಿರೂಪಣೆಯಲ್ಲಿ, ಈ ಇಕ್ಕಟ್ಟಾದ ಬಾಗಿಲು ಮತ್ತು ಇಕ್ಕಟ್ಟಾದ ದಾರಿ ಪ್ರತಿಯೊಬ್ಬರಿಗೆ ಹೇಗೆ ಸಂಬಂಧವಾಗಿದೆ? France ರವರು ಹೀಗೆ ಕೇಳಿದ್ದಾರೆ, "ಈ 'ಇಕ್ಕಟ್ಟಾದ ಬಾಗಿಲು' ಇದು ಪ್ರಾರಂಭದಲ್ಲಿ ಇದೆಯೋ ಅಥವಾ ಇದು 'ಕಷ್ಟಕರವಾದ ಮಾರ್ಗದ' ಅಂತ್ಯದಲ್ಲಿದೆಯೋ? ಇಲ್ಲವೇ ಬಹುಶಃ ಈ ಕಷ್ಟಕರವಾದ ಮಾರ್ಗ ಬಾಗಿಲಿನಿಂದ ನೋಡಿದಂತೆ ಇಡಿ ಮಾರ್ಗ ಅದೇ ರೀತಿಯಾಗಿ ಇರುವದೋ ಅವೆರೆಡು ಆಲೋಚನೆಯ ಮಾರ್ಗಗಳು ಒಂದು ಕಡೆ ಸೇರುತ್ತವೆಯೋ?"[28] ಈ ಪ್ರಶ್ನೆಗೆ ಉತ್ತರಿಸಲು ನಿರ್ಲಕ್ಷಿಸಿ, ಯೇಸುವಿನ ವಿಷಯ ಸ್ಪಷ್ಟವಾಗಿದೆ. ಜನರು **ಜೀವನದ** ಎರಡು ಮಾರ್ಗಗಳಲ್ಲಿ ಯಾವುದಾದರು ಒಂದು ಆರಿಸಿಕೊಳ್ಳುವದು ಯೇಸುವಿನ ಇಚ್ಛೆಯಾಗಿತ್ತು, ಇಲ್ಲಿ ಎರಡು ವಿಭಿನ್ನವಾದ ಗಮ್ಯ ಸ್ಥಾನಗಳ ದೃಶ್ಯಾವಳಿಗಳಿವೆ: ನಿತ್ಯಜೀವ ಮತ್ತು ನಿತ್ಯ ನಾಶನ.[29] ಎರಡು ಮಾರ್ಗಗಳಲ್ಲಿ ನಾವು ಕೇವಲ ಒಂದನ್ನು ಹಿಂಬಾಲಿಸಬೇಕು. ಒಂದನ್ನು ಆರಿಸಿಕೊಂಡು ಇನ್ನೊಂದನ್ನು ನಿರಾಕರಿಸಬೇಕು. ಅವು ಎರಡು ವಿಭಿನ್ನವಾದ ಸ್ಥಳಗಳಲ್ಲಿ ಪ್ರಾರಂಭಿಸುವವು, ಮಧ್ಯದಲ್ಲಿ ಕೂರುವದಲ್ಲ, ಮತ್ತು ಒಂದು ಮಾರ್ಗದಿಂದ ಇನ್ನೊಂದು ಮಾರ್ಗಕ್ಕೆ ಹೊಗಲು ಯಾವುದೇ ಅಡ್ಡದಾರಿಗಳು ಇಲ್ಲ. ಇಂದಿನ ನಮ್ಮ ಜೀವನದಲ್ಲಿ ಯಾವ ಮಾರ್ಗದಲ್ಲಿ ನಡೆಯಬೇಕು ಮತ್ತು ಯಾವ ಗಮ್ಯವನ್ನು ಸೇರಬೇಕೋ ಎಂಬ ನಿರ್ಧಾರವನ್ನು ಆಯ್ಕೆ ಮಾಡಬೇಕು. ನಿರ್ಧಾರಮಾಡದೇ ಹೋದರೆ, ಅದು ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುವ ತೀರ್ಮಾನವಾ ಗುತ್ತದೆ.

ಯೇಸು ತನ್ನ ಕೇಳುಗರಿಗೆ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯಲು ಒತ್ತಾಯ ಮಾಡಿದನು ಯಾಕೆಂದರೆ ಇನ್ನೊಂದು ಮಾರ್ಗ ಭಯಂಕರ ನಾಶನಕ್ಕೆ ನಡಿಸುತ್ತದೆ: **ನಾಶಕ್ಕೆ ಹೋಗುವ ಬಾಗಲು ದೊಡ್ಡದು, ದಾರಿ ಅಗಲ.** "ಅಗಲ" (*euruchōros*) ಎನ್ನುವ ಗ್ರೀಕ್ ಶಬ್ದಕ್ಕೆ "ವಿಶಾಲವಾದದ್ದು" ಎಂದರ್ಥ. ಈ ಮಾರ್ಗವು ಯಾವುದೇ ನಿರ್ಬಂದಗಳು ಅಥವಾ ನೀತಿಗಳು ಹೊಂದಿರುವದಿಲ್ಲ. ಇದು ಯಾವುದೇ ಸಮರ್ಪಿಸುವಿಕೆ, ನೀತಿಗಳು, ಅಥವಾ ಆತ್ಮೀಕತೆಗೆ ಅಪ್ಪಣೆಮಾಡುವದಿಲ್ಲ; ಆದರೆ ಇದರ ಅಂತಿಮ ಬಹುಮಾನ ಮರಣ ಮತ್ತು ನಾಶನ (ರೋಮಾಪುರ 6:23). ನಾಶನಕ್ಕೆ ನಡಿಸುವ ಮಾರ್ಗವಾಗಿದ್ದರು ಅನೇಕರು ಈ ಅಗಲವಾದ ಮತ್ತು ಆಹ್ವಾನವಿರುವ ಮಾರ್ಗವನ್ನೇ ಬಹು ಜನರು ಪ್ರಯಾಣಿಸಲು ಆಯ್ದುಕೊಳ್ಳುವರು. ದೇವರ ಮಕ್ಕಳು ಯಾವಾಗಲು ಅಲ್ಪ ಸಂಖ್ಯೆಯಲ್ಲಿರುತ್ತಾರೆ (ನೋಡಿರಿ ಆದಿಕಾಂಡ 6:1-22).

ಈ ವಾಕ್ಯಗಳಿಗೆ ಸಂಬಂಧಿಸಿದಂತೆ, ಈ "ಎರಡು ಮಾರ್ಗಗಳ" ರೂಪಕಾಲಂಕಾರ ಸಾಮಾನ್ಯವಾಗಿ ಆಡಂಬರದ ಭಾಷಾ ತಂತ್ರವಾಗಿದೆ, ಹಳೆ ಒಡಂಬಡಿಕೆಯಿಂದ ಉದಾಹರಣೆಗಳನ್ನು ನೀಡಿ, ಮೃತ ಸಮುದ್ರದ ಸುರುಳಿಗಳು, ರಬ್ಬಿಗಳ ಸಾಹಿತ್ಯ, ಮತ್ತು ಅಪೊಸ್ತಲರ ಪಿತೃಗಳು ಸೇರಿವೆ.[30] ಹಳೆ ಒಡಂಬಡಿಕೆಯಲ್ಲಿಯೇ ದೇವರ ಜನರು "ಆಶೀರ್ವಾದಗಳು" ಮತ್ತು "ಶಾಪಗಳು" (ಧರ್ಮೋಪದೇಶಕಾಂಡ 11:26), "ಜೀವನ ಮತ್ತು ಸಮೃದ್ಧಿ" ಮತ್ತು "ಮರಣ ಮತ್ತು ವಿರೋಧಿ" (ಧರ್ಮೋಪದೇಶಕಾಂಡ 30:15), **"ಕರ್ತನು"**

ಮತ್ತು "ನಿಮ್ಮ ಪಿತೃಗಳು ಸೇವಿಸಿದ ದೇವರುಗಳು" (ಯೆಹೂಶುವ 24:14, 15), ನೀತಿಯತೆ ಮತ್ತು ದುಷ್ಟತನ (ಕೀರ್ತನೆ 1:1-6), ಮತ್ತು "ಜೀವನದ ಮಾರ್ಗ" ಮತ್ತು "ನಾಶನದ ಮಾರ್ಗ" (ಯೆರೆಮೀಯ 21:8) ಎರಡರಲ್ಲಿ ಒಂದನ್ನು ಆರಿಸಿಕೊಳ್ಳಲು ನಿಂತುಕೊಳ್ಳಬೇಕಾಯಿತು.

### ಎರಡು ರೀತಿಯ ಮರಗಳು ಮತ್ತು ಸುಳ್ಳು ಪ್ರವಾದಿಗಳ ಫಲ (7:15-20)

**[15]ಸುಳ್ಳುಪ್ರವಾದಿಗಳ ವಿಷಯದಲ್ಲಿ ಎಚ್ಚರವಾಗಿರ್ರಿ. ಅವರು ಕುರೀವೇಷ ಹಾಕಿಕೊಂಡು ನಿಮ್ಮ ಬಳಿಗೆ ಬರುತ್ತಾರೆ; ಆದರೆ ಒಳಗೆ ನೋಡಿದರೆ ಅವರು ಬಡಕೊಂಡು ಹೋಗುವ ತೋಳಗಳೇ. [16]ಅವರ ಫಲಗಳಿಂದ ಅವರನ್ನು ತಿಳುಕೊಳ್ಳುವಿರಿ. ಮುಳ್ಳುಗಿಡಗಳಲ್ಲಿ ದ್ರಾಕ್ಷೇ ಹಣ್ಣುಗಳನ್ನೂ ಮದ್ದುಗುಣಿಕೇಗಿಡಗಳಲ್ಲಿ ಅಂಜೂರಗಳನ್ನೂ ಕೊಯ್ಯುವದುಂಟೇ? [17]ಹಾಗೆಯೇ ಒಳ್ಳೇ ಮರಗಳೆಲ್ಲಾ ಒಳ್ಳೇ ಫಲವನ್ನು ಕೊಡುವವು; ಹುಳುಕು ಮರವು ಕೆಟ್ಟ ಫಲವನ್ನು ಕೊಡುವದು. ಒಳ್ಳೇ ಮರವು ಕೆಟ್ಟ ಫಲವನ್ನು ಕೊಡಲಾರದು; [18]ಹುಳುಕು ಮರವು ಒಳ್ಳೇ ಫಲವನ್ನು ಕೊಡಲಾರದು. [19]ಒಳ್ಳೇ ಫಲವನ್ನು ಕೊಡದ ಎಲ್ಲಾ ಮರಗಳನ್ನು ಕಡಿದು ಬೆಂಕಿಯಲ್ಲಿ ಹಾಕುತ್ತಾರೆ. [20]ಹೀಗಿರಲಾಗಿ ಅವರ ಫಲಗಳಿಂದ ಅವರನ್ನು ತಿಳಿದುಕೊಳ್ಳುವಿರಿ.**

**ವಚನ 15.** ಯೇಸು ಎರಡು ಬೇರೆ ಬೇರೆ ಮಾರ್ಗದ ಬೋಧನೆಯಿಂದ ಆತನು ಎರಡು ಬಗೆಯ ಮರಗಳ ವಿಷಯಕ್ಕೆ ಬಂದನು - ಒಳ್ಳೆಯ ಮರ ಮತ್ತು ಕೆಟ್ಟ ಮರ. ಆತನು ಸುಳ್ಳು ಪ್ರವಾದಿಗಳ ವಿಷಯದಲ್ಲಿ ಎಚ್ಚರಿಸಿದನು. ಇಲ್ಲಿ ಸ್ಪಷ್ಟವಾದ ಮುಂದೆ ಸಂಭವಿಸುವ ಎಚ್ಚರಿಕೆಯೇನೆಂದರೆ, ಮುಂಬರುವ "ಸುಳ್ಳು ಪ್ರವಾದಿಗಳು" ಜನರನ್ನು "ಅಗಲವಾದ ಮಾರ್ಗ"ದಲ್ಲಿ ನಡೆಯುವಂತೆ ಮರಳು ಮಾಡುವರು.

ಸುಳ್ಳು ಪ್ರವಾದಿಗಳ ವಿಷಯದಲ್ಲಿ ಹೇಳಿರುವ ಎಚ್ಚರಿಕೆಯು ಇಸ್ರಾಯೇಲರು ಸ್ಥಾಪಿಸಲ್ಪಟ್ಟ ಹಿಂದಿನ ದಿನಕ್ಕೆ ಹೋಗಬೇಕಾಗುತ್ತದೆ. ಮೋಶೆ ಸುಳ್ಳು ಪ್ರವಾದಿಯನ್ನು ಜನರಿಗೆ ಹೀಗೆ ಹೇಳುವದರಲ್ಲಿ ಗುರುತಿಸಿದನು, "ಪ್ರವಾದಿಯು ಯೆಹೋವನ ಮಾತೆಂದು ಹೇಳಿ ಮುಂತಿಳಿಸಿದ ಸಂಗತಿ ನಡೆಯದೆ ಹೋದರೆ ಅವನ ಮಾತು ಯೆಹೋವನದಲ್ಲವೆಂದು ನೀವು ತಿಳಿದುಕೊಳ್ಳಬೇಕು. ಅವನು ಅಧಿಕಾರವಿಲ್ಲದೆ ಮಾತಾಡಿದವನು; ಅವನಿಗೆ ಹೆದರಬಾರದು" (ಧರ್ಮೋಪದೇಶಕಾಂಡ 18:22). ಮತ್ತೊಂದು ಮಾತಿನಲ್ಲಿ ಹೇಳುವದಾದರೆ, ಒಬ್ಬ ವ್ಯಕ್ತಿ ಪ್ರವಾದಿಯೆಂದು ಹೇಳಿಕೊಂಡು ಮುಂದೆ ಆಗುವದನ್ನು ನುಡಿಯುತ್ತಾನೆ ಅದು ನಿಜವಾಗದೆ ಹೋದರೆ, ಅವನು ಅಥವಾ ಅವಳು ಸುಳ್ಳು ಪ್ರವಾದಿಯೆಂದು ಪ್ರಕಟಿಸಬೇಕು.

ಯೇಸು ಹೇಳಿದ ಸುಳ್ಳು ಪ್ರವಾದಿಗಳು ಯಾರು? ಆತನು ಯೆಹೂದ್ಯ ಜನರಿಗೆ ಹೇಳುತ್ತಿರುವದರಿಂದ, ತಾವು ಮೆಸ್ಸೀಯನೆಂದು ಹೇಳಿಕೊಂಡಿದ್ದ ಸುಳ್ಳುಪ್ರವಾದಿಗಳು ಯೇಸುವಿನ ಮನಸ್ಸಿನಲ್ಲಿರಬಹುದು. ತರುವಾಯ ಆತನು ತನ್ನ ಅಪೊಸ್ತಲರಿಗೆ ಹೀಗೆ ಹೇಳಿದನು, "ಬಹುಮಂದಿ ಸುಳ್ಳು ಪ್ರವಾದಿಗಳು ಸಹ ಎದ್ದು ಅನೇಕರನ್ನು ಮೋಸಗೊಳಿಸುವರು ... ಸುಳ್ಳುಕ್ರಿಸ್ತರೂ ಸುಳ್ಳುಪ್ರವಾದಿಗಳೂ ಎದ್ದು ಸಾಧ್ಯವಾದರೆ ದೇವರಾದುಕೊಂಡವರನ್ನು ಸಹ ಮೋಸಗೊಳಿಸುದಕ್ಕೋಸ್ಕರ ದೊಡ್ಡ ದೊಡ್ಡ ಸೂಚಕಕಾರ್ಯಗಳನ್ನೂ ಅದ್ಭುತ ಕಾರ್ಯಗಳನ್ನೂ ಮಾಡಿ ತೋರಿಸುವರು" (24:11, 24). ಇಂಥಹಾ ಸುಳ್ಳು ಮೆಸ್ಸೀಯ ಎನ್ನಿಸಿಕೊಂಡವರು ಮೊದಲನೇಯ ಶತಮಾನದ ಆಸುವಾಸಿನಲ್ಲಿ ಎದ್ದರು, ಅವರು ರೋಮನ್ನರನ್ನು ಸದೆಬಡಿಯಲು ಸೈನ್ಯವನ್ನು ಒಟ್ಟುಗೂಡಿಸಿದರು. ಹಾಗಿದ್ದರೂ, ಅವರ ಸೈನ್ಯಗಳು ಗುಂಪುಗಳು ಸೋಲುವಾಗ, ಇವರು ದೇವರಿಂದ ಕರೆದವರಾಗಲೀ ಇಲ್ಲವೆ ಅಭಿಷೇಕ ಹೊಂದಿದವರಾಗಲೀ ಆಗಿರಲಿಲ್ಲವೆಂದು ಸ್ಪಷ್ಟವಾಗುತ್ತದೆ. ಅಪೊಸ್ತಲರ ಕೃತ್ಯದಲ್ಲಿ ಇಂಥಹಾ ಮೂರು ತರಹದ ಸುಳ್ಳುಗಾರರನ್ನು ಸೂಚಿಸುತ್ತದೆ: ಥೈದನು, ಗಲಿಲಾಯದ

ಯೂದನು, ಮತ್ತು ಐಗುಪ್ತನು (ಅವನ ಹೆಸರು ಕೊಟ್ಟಿರುವದಿಲ್ಲ) (ಅಪೊಸ್ತಲರ ಕೃತ್ಯಗಳು 5:36, 37; 21:38).[31]

ಯೇಸು ತನ್ನ ಶಿಷ್ಯರಿಗೆ ವಿಶೇಷವಾಗಿ ನಿರ್ದೇಶಿಸಿ ರಾಜ್ಯಕ್ಕಾಗಿ (ಸಭೆ)ಗಾಗಿ ನಿರೀಕ್ಷೆಯಿಂದಿರಬೇಕೆಂದು ಹೇಳಿದನು, ಆತನು ಕ್ರೈಸ್ತತ್ವದಲ್ಲಿ ಸುಳ್ಳು ಬೋಧಕರ ಅಪಾಯವನ್ನು ಮುಂದೆ ಹೇಳಿರಬಹುದು, ಸಭೆಯ ಪ್ರಾರಂಭದ ದಿನಗಳಲ್ಲಿ, ಹೊಸ ಒಡಂಬಡಿಕೆಯ ಪ್ರಮಾಣಿಕ ಗ್ರಂಥವಾಗಿ ಪೂರ್ಣಗೊಳಿಸಬೇಕಾಗಿತ್ತು, ಪ್ರವಾದನಾ ವರವು ಸಭೆಯವರನ್ನು ಅಭಿವೃದ್ಧಿಪಡಿಸಲು ಮತ್ತು ಸ್ಥಾಪಿಸುವದಕ್ಕಾಗಿ ಇದ್ದವು (1 ಕೊರಿಂಥ 12:10, 28; 14:1-40). ಅಪೊಸ್ತಲರೂ ಮತ್ತು ಪ್ರವಾದಿಗಳು ಎಂಬ ಅಸ್ತಿವಾರದ ಮೇಲೆ ಸಭೆಯು ಕಟ್ಟಲ್ಪಟ್ಟಿದೆ (ಎಫೆಸ 2:20). ಅದುವೆ, ಅವರ ಕ್ರಿಸ್ತನ ಕುರಿತ ದೈವ ಪ್ರೇರೆಪಣೆಯ ಉಪದೇಶಗಳು ಮತ್ತು ಆತನ ಚಿತ್ತದ ಮೇಲೆ ಸ್ಥಾಪಿಸಲ್ಪಟಿತು. ಕ್ರಿಸ್ತನು ನಂಬಿಕೆಯುಳ್ಳ ಅಪೊಸ್ತಲರನ್ನು ಮತ್ತು ಪ್ರವಾದಿಗಳನ್ನು ಕಳುಹಿಸಿಕೊಟ್ಟನು. ಹಾಗಿದ್ದರೂ, ಸುಳ್ಳು ಬೋಧಕರು ಅವರನ್ನು ನಕಲು ಮಾಡುತ್ತಿದ್ದರು, ಅವರು ಸ್ವಂತ ಆಲೋಚನೆಗಳನ್ನು ಮತ್ತು ಸುಳ್ಳು ಪ್ರವಾದನೆಗಳನ್ನು ಇದರಲ್ಲಿ ಸೇರಿಸುತ್ತಿದ್ದರು. ಆದುದರಿಂದ, ಹೇಳಲ್ಪಟ್ಟ ಉಪದೇಶಗಳು ಮೌಲ್ಯಮಾಪನ ಮಾಡಬೇಕಾಗಿತ್ತು (1 ಕೊರಿಂಥ 12:10). ಪೌಲನು ಥೆಸಲೋನಿಕದವರಿಗೆ ಸಲಹೆ ಕೊಟ್ಟಿದ್ದೇನೆಂದರೆ, "ಪವಿತ್ರಾತ್ಮವನ್ನು ನಂದಿಸಬೇಡಿರಿ; ಪ್ರವಾದನೆಗಳನ್ನು ಹೀನೈಸಬೇಡಿರಿ; ಆದರೆ ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ; ಸಕಲವಿಧವಾದ ಕೆಟ್ಟತನಕ್ಕೆ ದೂರವಾಗಿರಿ" (1 ಥೆಸಲೋನಿಕ 5:19-21).

ಸುಳ್ಳು ಪ್ರವಾದಿಗಳು ಸಭೆಯ ಪ್ರಾರಂಭದ ದಿನಗಳಲ್ಲಿದ್ದರು, ಮತ್ತು ಎಫೆಸದಲ್ಲಿರುವ ಸಭೆಗೆ ಪೌಲನು ಎಚ್ಚರಿಸಿದನು, "ನಾನು ಹೋದ ಮೇಲೆ ಕ್ರೂರವಾದ ತೋಳಗಳು ನಿಮ್ಮೊಳಗೆ ಬರುವವೆಂದು ನಾನು ಬಲ್ಲೆನು; ಅವು ಹಿಂಡನ್ನು ಕನಿಕರಿಸುವದಿಲ್ಲ" (ಅಪೊಸ್ತಲರ ಕೃತ್ಯಗಳು 20:29). ಪೇತ್ರನು ಸಹ ಎಚ್ಚರಿಸಿದನು, "ನಿಮ್ಮಲ್ಲಿಯೂ ಸುಳ್ಳು ಬೋಧಕರು ಇರುವರು" (2 ಪೇತ್ರ 2:1). ಪೇತ್ರನು ಬರೆದ ಅನೇಕ ದಿನಗಳ ನಂತರ, "ಅನೇಕ ಮಂದಿ ಸುಳ್ಳು ಪ್ರವಾದಿಗಳು ಲೋಕದೊಳಗೆ ಬಂದಿರುವರು" (1 ಯೋಹಾನ 4:1) ಎಂದು ಅಪೊಸ್ತಲನಾದ ಯೋಹಾನನು ಬರೆದಿದ್ದಾನೆ. "ಈ ಉಪದೇಶಕ್ಕೆ ಒಪ್ಪದಿರುವ ಯಾವನಾದರೂ ನಿಮ್ಮ ಬಳಿಗೆ ಬಂದರೆ ಅವನನ್ನು ಮನೆಯೊಳಗೆ ಸೇರಿಸಿಕೊಳ್ಳಬೇಡಿರಿ, ಅವನಿಗೆ ಶುಭವಾಗಲಿ ಎಂದು ಹೇಳಬೇಡಿರಿ. ಅವನಿಗೆ ಶುಭವಾಗಲಿ ಎಂದು ಹೇಳುವವನು ಅವನ ದುಷ್ಕೃತ್ಯಗಳಲ್ಲಿ ಪಾಲುಗಾರನಾಗುತ್ತಾನೆ" (2 ಯೋಹಾನ 10, 11) ಎಂದು ಸಹ ಯೋಹಾನನು ಬರೆದಿದ್ದಾನೆ. ಕ್ರಿಸ್ತನು ಶರೀರದಾರಿಯಾಗಿ ಬಂದಿಲ್ಲವೆಂದು ಬೋಧಿಸುವವರಿಗೆ ಆತನು ನಿರ್ದಿಷ್ಟವಾಗಿ ಸೂಚಿಸುತ್ತಾನೆ. ಕ್ರೈಸ್ತತ್ವದಲ್ಲಿ ಸುಳ್ಳು ಪ್ರವಾದಿಗಳು ಮತ್ತು ಬೋಧಕರು ಸಭೆಯು ಪ್ರಾರಂಭವಾದ ದಿನದಿಂದಲೂ ಬಹು ಸಂಖ್ಯೆಯಲ್ಲಿ ವಿಸ್ತರಿಸಿದರು.[32]

ಯೇಸು ಹೇಳಿದ್ದೇನೆಂದರೆ ಇಂಥಹಾ ಸುಳ್ಳು ಪ್ರವಾದಿಗಳು **ಕುರಿವೇಷ ಹಾಕಿಕೊಂಡು ನಿಮ್ಮ ಬಳಿಗೆ ಬರುತ್ತಾರೆ; ಆದರೆ ಒಳಗೆ ನೋಡಿದರೆ ಅವರು ಬಡಕೊಂಡು ಹೋಗುವ ತೋಳಗಳೇ.** ಸುಳ್ಳು ಪ್ರವಾದಿಗಳ ಮೋಸದ ಸ್ವಭಾವ ಸ್ಪಷ್ಟವಾಗಿದೆ. ಈ ಬೋಧಕರು ಕುರುಬರಂತೆ ವೇಷಧರಿಸುತ್ತಾರೆ ಹೊರತು ಕುರಿಗಳಂತೆ ಅಲ್ಲ. ಅವರು ಕುರಿಗಳ ಉಣ್ಣೆ ಧರಿಸುತ್ತಿದ್ದರು ಎಂದು ರೂಪಾಲಂಕಾರವು ಹೇಳುತ್ತದೆ, ನಿಜವಾದ ಕುರುಬರಂತೆ ಕಾಣಿಸುತ್ತಾರೆ. ಈ ರೀತಿಯ ವಸ್ತ್ರಧಾರಣೆಯು ಹಿಂದಿನ ಕಾಲದ ಪ್ರವಾದಿಗಳು ಕಂಬಳಿಗಳನ್ನು ಕುರಿಗಳ ಚರ್ಮ ಒಳಗೊಂಡಂತಹ ವಸ್ತ್ರಗಳನ್ನು ಧರಿಸುತ್ತಿದ್ದರು (2 ಅರಸುಗಳು 1:8; ಜೆಕರ್ಯ 13:4; ಮತ್ತಾಯ 3:4; ಇಬ್ರಿಯ 11:37).

ಈ ಮೋಸಗಾರರು ವಿಶೇಷವಾಗಿ ಅಪಾಯಕಾರಿಗಳು ಯಾಕೆಂದರೆ ಅವರು ದೇವರ ನಿಜವಾದ ಸೇವಕರಂತೆ ವೇಷ ಧರಿಸುವರು ಅವರು ಉದಾರವಾಗಿ ಕುರಿಗಳ ಕುರಿತು

ಕಾಳಜಿವಹಿಸುವವರು. ಹಾಗಿದ್ದರೂ, ಅವರ ಪೂರ್ಣ ಉದ್ದೇಶ ನಾಶಮಾಡುವದೇ ಆಗಿದೆ, ಮತ್ತು ಅನಾಗರೀಕ ತೋಳಗಳಂತೆ, ಕುರಿಗಳನ್ನು ತಿಂದು ಬಿಡುತ್ತಾರೆ (ನೋಡಿರಿ ಯೋಹಾನ 10:10, 12; ಅಪೊಸ್ತಲರ ಕೃತ್ಯಗಳು 20:29; 2 ಕೊರಿಂಥ 11:13-15; 2 ತಿಮೊಥೆ 3:13). ಅವರು ನಂಬಿರುವಂಥ ವಿಷಯದ ಕುರಿತು ಅಪನಂಬಿಗಸ್ತರಾದರು ಮತ್ತು ಅವರು ತಮ್ಮ ವೈಯಕ್ತಿಕ ಲಾಭಕ್ಕಾಗಿ ಉತ್ತೇಜನ ಹೊಂದಿದ್ದರು.

**ವಚನ 16. ಅವರ ಫಲಗಳಿಂದ ಅವರನ್ನು ತಿಳುಕೊಳ್ಳುವಿರಿ** ಎಂದು ಯೇಸು ಪ್ರಕಟಿಸಿದನು. ಸುಳ್ಳು ಪ್ರವಾದಿಗಳನ್ನು ನಾವು ಹೇಗೆ ಕಂಡುಹಿಡಿಯಬಹುದು? ಆತನು, ಪರಿಣಾಮಕಾರಿಯಾಗಿ, ಹೇಳಿದನು, "ಅವರ ಫಲಗಳನ್ನು ಪರೀಕ್ಷಿಸಬೇಕು." ಫಲವು ಉತ್ಪಾದಿಸಿದ ಮರದ ಸ್ವಭಾವವನ್ನು ಪ್ರತಿಬಿಂಬಿಸುತ್ತದೆ. **ಮುಳ್ಳುಗಿಡಗಳಲ್ಲಿ ದ್ರಾಕ್ಷೇ ಹಣ್ಣುಗಳನ್ನು** ಮತ್ತು **ಮದ್ದುಗುಣಿಕೇ ಗಿಡಗಳಲ್ಲಿ ಅಂಜೂರಗಳನ್ನೂ** ಬೆಳೆಯುವದಿಲ್ಲವೆಂದು ಯೇಸು ಹೇಳಿದರು. ನಿಜವಾಗಿಯೂ ದ್ರಾಕ್ಷೆ ಹಣ್ಣುಗಳು ದ್ರಾಕ್ಷೆ ಬಳ್ಳಿಗಳಲ್ಲಿ ಮತ್ತು ಅಂಜೂರವು ಮೆತ್ತಗಿನ ತೊಗಟೆ ಅಂಜೂರದ ಗಿಡದಲ್ಲಿ ಹಣ್ಣು ಬಿಡುತ್ತವೆ.

**ವಚನಗಳು 17, 18. ಹಾಗೆಯೇ ಒಳ್ಳೇ ಮರಗಳೆಲ್ಲಾ ಒಳ್ಳೇ ಫಲವನ್ನು ಕೊಡುವವು; ಹುಳುಕು ಮರವು ಕೆಟ್ಟ ಫಲವನ್ನು ಕೊಡುವದು. ಒಳ್ಳೇ ಮರವು ಕೆಟ್ಟ ಫಲವನ್ನು ಕೊಡಲಾರದು** ಎಂದು ಯೇಸು ಸೇರಿಸಿ ಹೇಳಿದರು. "ಒಂದು ವಿಷಯವನ್ನು ಒತ್ತಿ ಹೇಳಲು ಈ ವಚನಗಳು ಸೆಮಿಟಿಕ್ ಪದ್ಧತಿಯಲ್ಲಿ ಉದಾಹರಿಸುತ್ತವೆ: ಸಕಾರಾತ್ಮಕವಾದ ಹೇಳಿಕೆಯಾಗಿದೆ (17), ಮತ್ತು ನಂತರ ನಕರಾತ್ಮಕವಾಗಿ ಹೇಳಲಾಗಿದೆ (18)"[33] ಎಂದು ಹಿಲ್ ರವರು ವಿವರಿಸಿದ್ದಾರೆ. ಸುಳ್ಳು ಪ್ರವಾದಿಗಳ ಕೆಟ್ಟ ಫಲಗಳು ಅವರ ಅನೀತಿ ಜೀವನ ಶೈಲಿ ಅಥವಾ ಅವರಿಂದ ಕಲಿತವರು ಭ್ರಷ್ಟ ಜೀವಿತ ಜೀವಿಸುವದನ್ನು ಸೂಚಿಸುತ್ತದೆ.[34] ಅವರ ಸುಳ್ಳು ಬೋಧನೆಯು ಸಹ ಸೇರಿಸ ಲೇಬೇಕು (ನೋಡಿರಿ 12:31-37; ಲೂಕ 6:43-45). ಫಲವು ಕೆಟ್ಟದ್ದಾಗಿದೆ ಯಾಕೆಂದರೆ ಮರವು ಕೆಟ್ಟದ್ದಾಗಿದೆ.

**ವಚನಗಳು 19, 20. ಒಳ್ಳೇ ಫಲವನ್ನು ಕೊಡದ ಎಲ್ಲಾ ಮರಗಳನ್ನು ಕಡಿದು ಬೆಂಕಿಯಲ್ಲಿ ಹಾಕುತ್ತಾರೆ** ಎಂದು ಯೇಸು ಹೇಳಿ ಮುಕ್ತಾಯ ಮಾಡಿದನು. ಆತನ ಮಾತುಗಳು ಸ್ನಾನಿಕನಾದ ಯೋಹಾನನ ಮಾತುಗಳನ್ನು ಮತ್ತೇ ಹೇಳಿದಂತೆ ಇದ್ದವು (3:10ರ ಮೇಲೆ ವ್ಯಾಖ್ಯಾನ ನೋಡಿರಿ). ಜನರು ಹಣ್ಣಿನ ಮರಗಳನ್ನು ಹಾಕಿದಾಗ ಫಲಕೊಡಲಾರದ ಕೊಂಬೆಗಳನ್ನು ನಿರತರವಾಗಿ ಕತ್ತರಿಸಿ ಅವುಗಳನ್ನು ಬಿಸಾಡುತ್ತಾರೆ. ಫಲಕೊಡದವುಗಳನ್ನು ಕತ್ತರಿಸಿ ಹಾಕಿ ಫಲಕೊಡುವ ಮರಗಳಿಗೆ ಸ್ಥಳಮಾಡಿಕೊಡುತ್ತಾರೆ (ನೋಡಿರಿ ಯೋಹಾನ 15:2, 6). ಅದೇ ರೀತಿಯಾಗಿ, ಸುಳ್ಳು ಪ್ರವಾದಿಗಳು ಮತ್ತು ಬೋಧಕರನ್ನು ನ್ಯಾಯತೀರ್ಪಿನ ದಿನದಂದು ಬೇರೆ ಬೇರೆ ಮಾಡುವರು ಮತ್ತು ಅವರನ್ನು ನಿತ್ಯ ಅಗ್ನಿಯಲ್ಲಿ ಬಿಸಾಡುವರು (ಪ್ರಕಟಣೆ 20:10). ಅವರು ಈಗ ನ್ಯಾಯತೀರ್ಪಿನಿಂದ ತಪ್ಪಿಸಿಕೊಳ್ಳುವಂತೆ ಕಾಣಿಸಬಹುದು, ಆದರೆ "ಅವರ ನ್ಯಾಯತೀರ್ಪು ... ವ್ಯರ್ಥವಾದದ್ದಲ್ಲ, ಮತ್ತು ಅವರ ನಾಶವು ತೂಕಡಿಸುವದಿಲ್ಲ" (2 ಪೇತ್ರ 2:3). **ಅವರ ಫಲಗಳಿಂದ ಅವರನ್ನು ತಿಳಿದುಕೊಳ್ಳುವಿರಿ** ಎಂಬುದನ್ನು ಒತ್ತಿ ಹೇಳುವದಕ್ಕಾಗಿ ಪುನರುಚ್ಛರಿಸಲಾಗಿದೆ.

### ಎರಡು ಬಗೆಯ ಶಿಷ್ಯರು (7:21-23)

**[21]ನನ್ನನ್ನು ಸ್ವಾಮಿಾ, ಸ್ವಾಮಿಾ ಅನ್ನುವವರೆಲ್ಲರು ಪರಲೋಕರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ: ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು. [22]ಸ್ವಾಮಿಾ, ಸ್ವಾಮಿಾ ನಿನ್ನ ಹೆಸರಿನ ಮೇಲೆ ನಾವು ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ನಾವು ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ ಎಂದು ಆ ದಿನದಲ್ಲಿ ಎಷ್ಟೋ**

**ಜನರು ನನಗೆ ಹೇಳುವರು. [23]ಆಗ ನಾನು ಅವರಿಗೆ - ನಾನೆಂದೂ ನಿಮ್ಮ ಗುರುತು ಕಾಣೆನು; ಧರ್ಮವನ್ನು ಮೀರಿನಡೆಯುವವರೇ, ನನ್ನಿಂದ ತೊಲಗಿಹೋಗಿರಿ ಎಂದು ಎಲ್ಲರ ಮುಂದೆ ಹೇಳಿಬಿಡುವೆನು.**

**ವಚನ 21.** ಯೇಸು ಎರಡು ಬಗೆಯ ಶಿಷ್ಯರ ಮಧ್ಯೆಯಿರುವ ಭಿನ್ನತೆಯನ್ನು ಹೇಳುವದರ ಮುಖಾಂತರ ಮುಂದುವರಿಸಿದನು: ವಿಧೆಯರಾದರು ಮತ್ತು ಅವಿಧೆಯರಾದರು. ಆತನು ಮಾತುಗಳು ಸುಳ್ಳು ಪ್ರವಾದಿಗಳ ಚರ್ಚಿನೀಯಾಂಶವನ್ನು ಮುಂದುವರಿಸಿದಂತಿದ್ದವು, ಅವರು ಸ್ವತಃ ಮೋಸಹೋಗಿ ಸಂಕಷ್ಟಕ್ಕೊಳಗಾದರು. ಅವರು ಯಾರಿಗೆ ಬೋಧಿಸುತ್ತಿದ್ದಾರೋ ಅವರನ್ನು ಕೇವಲ ಮೋಸ ಮಾಡುವದಲ್ಲದೆ, ಆದರೆ ಅವರು ಸಹ, ಅಂತ್ಯದಲ್ಲಿ, ತಮ್ಮನ್ನೇ ಮೋಸಗೊಳಿಸಿಕೊಳ್ಳುತ್ತಾರೆ.

ಕೆಲವು ಸಾರಿ ಸುಳ್ಳು ಪ್ರವಾದಿಗಳು ಸಹ ಸತ್ಯವನ್ನು ಮಾತಾಡುತ್ತಾರೆ ಎಂದು ಯೇಸು ಒಪ್ಪಿಕೊಂಡರು. ಅವರು ಯೇಸುವನ್ನು **ಸ್ವಾಮಿಾ, ಸ್ವಾಮಿಾ** ಎಂದು ಕರೆದರು. ಅದು ಆತನ ಅಧಿಕಾರ ಮತ್ತು ದೈವೀಕತ್ವವನ್ನು ಗುರುತಿಸಿರುವಂತೆ ಸೂಚಿಸುತ್ತದೆ. "ಯೇಸುವೇ ಕರ್ತನೆಂದು" ಆದಿ ಸಭೆಯು ಕರೆದಂತೆಯೆ ಅವರು ಕರೆದರು (ರೋಮಾಪುರ 10:9; 1 ಕೊರಿಂಥ 12:3; ಫಿಲಿಪ್ಪಿ 2:11). ಲೂಕ 6:46ರಲ್ಲಿ ಯೇಸು ಕೇಳಿದನು, "ನೀವು ನನ್ನನ್ನು ಸ್ವಾಮೀ ಸ್ವಾಮೀ ಅಂತ ಕರೆದು ನಾನು ಹೇಳುವದನ್ನು ನಡಿಸದೆ ಇರುವದೇಕೆ?" ಸ್ವಾಮೀ ಸ್ವಾಮೀ ಎಂದು ಹೇಳುವದಷ್ಟೇ ಸಾಕಾಗಿಲ್ಲ. ಸ್ವಂತ ಮೋಸ ಹೋದ ಅದ್ಭುತ ಕಾರ್ಯಮಾಡುವವರು ಯೇಸುವಿಗೆ ಈ ಶಬ್ದಗಳಿಂದ ಕೂಗಿದರು ಸಹ ಅಂಥಹಾವರು **ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ.** ಯಾರು ದೇವರ ಚಿತ್ತದಂತೆ **ಮಾಡುತ್ತಾರೋ** ಅವರು **ಪ್ರವೇಶಿಸುವರೆಂದು** ಯೇಸು ಹೇಳಿದರು. ಯಾರು ರಕ್ಷಿಸಬೇಕೆಂದು ಬಯಸುತ್ತಾರೋ ಅವರು ನಿರ್ದಿಷ್ಟ ಕರಾರುಗಳಿಗೆ ಬದ್ಧರಾಗಿರಬೇಕು: ಅವರು ದೇವರ ಚಿತ್ತ ಅರಿತು ಅದಕ್ಕೆ ವಿಧೇ ಯರಾಗುವ ಜವಾಬ್ದಾರಿ ಅವರಿಗಿದೆ. "ನೀವು ನನ್ನನ್ನು ಪ್ರೀತಿಸುವುದಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ" (ಯೋಹಾನ 14:15) ಎಂದು ಯೇಸು ಹೇಳಿದ್ದಾರೆ. ಯೋಹಾನನು ತರುವಾಯ ಬರೆದನು, "ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ ..." (1 ಯೋಹಾನ 5:3).

**ವಚನ 22.** ಯೇಸು ವರ್ಣಿಸಿರುವ ದೃಶ್ಯ, ಸುಳ್ಳು ಪ್ರವಾದಿಗಳು (ಅವಿಧೆಯತೆಯ ಶಿಷ್ಯರು) ನ್ಯಾಯತೀರ್ಪಿನ **ಆ ದಿನದಂದು**[35] ಅವರು ಲೆಕ್ಕವನ್ನು ಕೊಡಬೇಕು.[36] ಸುಳ್ಳು ಪ್ರವಾದಿಗಳು **ಬೋಧನೆ** ಹೇಳಲು ಸಾಮರ್ಥ್ಯವುಳ್ಳವರು, **ದೆವ್ವಗಳನ್ನು ಬಿಡಿಸುತ್ತಿದ್ದರು**, ಮತ್ತು **ಅನೇಕ ಮಹತ್ಕಾರ್ಯಗಳನ್ನು** ಮಾಡುವರು ಎಂಬುದನ್ನು ಯೇಸು ಸ್ಥಿರಪಡಿಸಲಿಲ್ಲ ಅಥವಾ ನಿರಾ ಕರಿಸಲಿಲ್ಲ. ಹಾಗಿದ್ದರೂ, **ಮಾಡಲಿಲ್ಲವೇ** ಎಂಬ ಶಬ್ದವು ಸತ್ಯವೆಂದು ಸಾರುವ ಉತ್ತರವನ್ನು ಬಯಸುವಂತದ್ದಾಗಿದೆ. ಕೊನೆಪಕ್ಷ ಹಾಗೆ ಮಾಡಿದ್ದೆವೆಂದು ಅವರು ಆಲೋಚಿಸಿರಬಹುದು. ಯೇಸುವಿನ ಹೆಸರಿನಲ್ಲಿ ಈ ಅದ್ಭುತ ಕಾರ್ಯಗಳು ನಿಜವಾಗಿಯೂ ಮಾಡಿರುವ ಸಾಧ್ಯತೆ ಇದೆ. ಮಾರ್ಕ 9:38, 39ರಲ್ಲಿ, ಅಪೊಸ್ತಲರ ಗುಂಪಿನವನಲ್ಲದ ಒಬ್ಬನು ಯೇಸುವಿನ ಹೆಸರಿನಲ್ಲಿ ದೆವ್ವಗಳನ್ನು ಬಿಡಿಸಿದ ಒಬ್ಬ ಮನುಷ್ಯನ ಕುರಿತು ಅಪೊಸ್ತಲನಾದ ಯೋಹಾನನು ಯೇಸುವಿಗೆ ದೂರು ಹೇಳಿದನು. ಅಪೊಸ್ತಲರ ಕೃತ್ಯಗಳು 3:6 ಮತ್ತು 9:34ರಲ್ಲಿ, ಅಪೊಸ್ತಲರು ಯೇಸುವಿನ ಹೆಸರನ್ನು ಉಪಯೋಗಿಸಿ ಅದ್ಭುತವಾಗಿ ಗುಣಪಡಿಸಿದರು. ಒಂದು ಸಾರಿ ಕೆಲವು ಯೆಹೂದ್ಯ ಮಾಂತ್ರಿಕರು ಯೇಸುವಿನ ಹೆಸರನ್ನು ತಮ್ಮ ಸ್ವಂತ ಲಾಭಕ್ಕಾಗಿ ಉಪಯೋಗಿಸಿದರು, ಆದರೆ ಅವರ ಯೋಜನೆ ಹಿಂದಿನಿಂದ ಬೆಂಕಿಹಚ್ಚುವದೇ ಆಗಿತ್ತು. ದೆವ್ವಹಿಡಿದವನು ಅವರ ಮೇಲೆ ಹಾರಿಬಿದ್ದು ಆಕ್ರಮಿಸಿದ್ದರಿಂದ ಅವರನ್ನು ಬೆತ್ತಲೆಯಾಗಿ ಮತ್ತು ಗಾಯವುಳ್ಳವರಾಗಿಯೂ ಮಾಡಿದನು (ಅಪೊಸ್ತಲರ ಕೃತ್ಯಗಳು 19:13-16).

**ವಚನ 23.** ಯೇಸು ಅವಿಧೆಯತೆಯುಳ್ಳವರಿಗೆ ನ್ಯಾಯ ತೀರ್ಪು ಕೊಟ್ಟನೆಂಬುದನ್ನು ನೋಡುತ್ತೇವೆ. **ಹೇಳಿ ಬಿಡುವೆನು** ಎನ್ನುವ ಶಬ್ದವು ಈ ಹಿನ್ನಲೆಯಲ್ಲಿ ಅಧಿಕೃತವಾದ ಪ್ರಕಟಣೆಯನ್ನು ಸೂಚಿಸುತ್ತದೆ. ಅವರು ವೈಯಕ್ತಿಕವಾಗಿ ತಮ್ಮನ್ನು ಯೇಸುವಿನ ಹಿಂಬಾಲಕರೆಂದು ಹೇಳಿಕೊಂಡರು ಮತ್ತು ಅವರು ಅನೇಕ ಮಹತ್ಕಾರ್ಯಗಳನ್ನು ಮಾಡಿದವರೆಂದು ತಮ್ಮಷ್ಟಕ್ಕೆ ತಾವುಗಳು ಅಂದುಕೊಂಡರು ಆದರೆ ಅವರು ಆತನ ನಿಜವಾದ ಹಿಂಬಾಲಕರಾಗಿರಲಿಲ್ಲ.

**ನಾನೆಂದು ನಿಮ್ಮ ಗುರುತು ಕಾಣೆನು**; ಎಂದು ಯೇಸು ಅವರಿಗೆ ಸಾಮಾನ್ಯವಾಗಿ ಹೇಳಿದರು. ಐದು ಬುದ್ಧಿಯಿಲ್ಲದ ಕನ್ಯೆಯರ ಯೇಸುವಿನ ಸಾಮ್ಯದಲ್ಲಿ ಅಂಥದ್ದೆ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ (25:12; ನೋಡಿರಿ ಲೂಕ 13:25). ಈ ವ್ಯಕ್ತಪಡಿಸುವಿಕೆಯಿಂದ ಯೇಸು ಹೇಳುವ ಅರ್ಥವೇನು? "ನಾನೆಂದು ನಿಮ್ಮ ಗುರುತು ಕಾಣೆನು" ಎನ್ನುವದು ನಿರಾಕರಿಸುವ ಸೂತ್ರದ ಪ್ರಕಟಣೆಯಾಗಿದೆ (ನೋಡಿರಿ 26:70, 72, 74). "ತನ್ನವರು ಯಾರೆಂಬುದನ್ನು ಕರ್ತನು ತಿಳಿದಿದ್ದಾನೆಂತಲೂ" ತರುವಾಯ, "ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರು ದುರ್ಮಾರ್ಗತನವನ್ನು ಬಿಟ್ಟು ಬಿಡಬೇಕೆಂಬುದು" ಪೌಲನು ಹೇಳಿದನು (2 ತಿಮೊಥೆ 2:19).

**ಧರ್ಮವನ್ನು ಮೀರಿನಡೆಯುವವರೇ, ನನ್ನಿಂದ ತೊಲಗಿಹೋಗಿರಿ** ಈ ಶಬ್ದಗಳು ಕೀರ್ತನೆ 6:9ರ ಕನ್ನಡಿಯಂತಿವೆ. ಈ ಸನ್ನಿವೇಶದಲ್ಲಿರುವಂತೆಯೇ ಕೀರ್ತನೆಯಲ್ಲಿರುವ ಮಾತುಗಳು ನೀತಿವಂತರು ಸಂಕಷ್ಟಕ್ಕೆ ಒಳಗಾದಾಗ ಅವರ ಹಿಂಸಕರಿಗೆ ಹೇಳಿದ ಮಾತುಗಳೇ ಹೊರತು ದುಷ್ಟ ಜನರು ತೀರ್ಪು ಕೊಡುವವರಿಗಲ್ಲ ಎಂದಿದೆ. "ನನ್ನಿಂದ ತೊಲಗಿ ಹೋಗಿರಿ" ಎನ್ನುವಂಥದ್ದು ಅವಿಧೇಯರಾದವರು ಅನುಭವಿಸುತ್ತಿರುವ ದೇವರ ಪ್ರಸನ್ನತೆಯಿಂದ ತೆಗೆದು ಹಾಕಿರುವ ಶಿಕ್ಷೆಯನ್ನು ಸೂಚಿಸುತ್ತದೆ (2 ಥೆಸಲೋನಿಕ 1:9, 10; ಪ್ರಕಟಣೆ 21:7, 8; 22:14, 15). ಕ್ರಿಸ್ತನ ಹಿಂಬಾಲಕರೆಂದು ಹೇಳಿಕೊಂಡರು ಸಹ, ಈ ಸುಳ್ಳು ಸೇವಕರು "ಧರ್ಮಮೀರಿ ನಡೆಯುವದನ್ನು" ಮುಂದುವರಿಸುತ್ತಿದ್ದಾರೆ. ಗ್ರೀಕ್ ಭಾಷೆಯಲ್ಲಿ, "ಅಭ್ಯಾಸ ಮಾಡುತ್ತಾರೆ" ಎನ್ನುವದು ವರ್ತಮಾನದ ಕೃದ್ವಾಚಕ ಪದವಾಗಿದೆ, ಇದು ಮುಂದುವರಿಯುತ್ತಿರುವ ಕಾರ್ಯವನ್ನು ಸೂಚಿಸುತ್ತದೆ. ಆದಾಗ್ಯೂ ಅವರು ಅನೇಕ ಉತ್ತಮ ಕಾರ್ಯಗಳನ್ನು ಮಾಡಿದ್ದೇವೆಂದು ಹೇಳುತ್ತಿದ್ದರೂ ಸಹ, ಅವರು ಅವಿಧೇಯತೆಯ ಜೀವಿತದಲ್ಲಿ ಜೀವಿಸುತ್ತಿದ್ದರು.

## ಎರಡು ಬಗೆಯ ಮನೆ ಕಟ್ಟುವವರು (7:24-27)

**24ಆದದರಿಂದ, ಈ ನನ್ನ ಮಾತುಗಳನ್ನು ಕೇಳಿ ಅವುಗಳಂತೆ ನಡೆಯುವವನು ಬಂಡೆಯ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಯುಳ್ಳ ಮನುಷ್ಯನನ್ನು ಹೋಲುವನು. 25ಕಟ್ಟಿದ ಮೇಲೆ ಮಳೆ ಸುರಿಯಿತು; ಹಳ್ಳಗಳು ಬಂದವು; ನಾಲ್ಕು ಕಡೆಯಿಂದ ಗಾಳಿ ಬೀಸಿ ಆ ಮನೆಗೆ ಬಡಿಯಿತು. ಆದಾಗ್ಯೂ ಅದರ ಅಸ್ತಿವಾರವು ಬಂಡೆಯ ಮೇಲಿದ್ದರಿಂದ ಅದು ಬೀಳಲಿಲ್ಲ, 26ಆದರೆ ಈ ನನ್ನ ಮಾತುಗಳನ್ನು ಕೇಳಿಯೂ ಅವುಗಳಂತೆ ನಡೆಯದ ಪ್ರತಿಯೊಬ್ಬನು ಉಸುಬಿನ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಹೀನ ಮನುಷ್ಯನನ್ನು ಹೋಲುವನು. 27ಕಟ್ಟಿದ ಮೇಲೆ ಮಳೆ ಸುರಿಯಿತು; ಹಳ್ಳಗಳು ಬಂದವು; ನಾಲ್ಕು ಕಡೆಯಿಂದ ಗಾಳಿ ಬೀಸಿ ಆ ಮನೆಗೆ ಹೊಡೆಯಿತು. ಆಗ ಅದು ಧಡಮ್ಮನೆ ಕಡುಕೊಂಡು ಬಿತ್ತು.**

**ವಚನ 24.** ಯೇಸು ಈ ಪ್ರಸಂಗವನ್ನು ಇಬ್ಬರು ಕೇಳುವವರ (ಅಥವಾ ಮನೆ ಕಟ್ಟುವವರ) ಸಾಮ್ಯವನ್ನು ಹೇಳಿ ಮುಕ್ತಾಯ ಮಾಡುತ್ತಾನೆ. ಇದರಲ್ಲಿ ಆತನು ಎರಡು ಸಾರಿ **ಈ ನನ್ನ ಮಾತುಗಳನ್ನು ಕೇಳಿ**ದವರೆಲ್ಲರು ಎಂದು ಹೇಳಿದ್ದಾನೆ (7:24, 26). ಕರ್ತನ ಮಾತುಗಳು ಜನರು ತಮ್ಮ ನಡತೆಯನ್ನು ಕಟ್ಟುವದಕ್ಕೆ ಅಸ್ತಿವಾರವಾಗಿವೆ.

ಕೇಳಿಸಿಕೊಳ್ಳುವದು ಮಾತ್ರವೇ ಸಾಕಾಗುವದಿಲ್ಲ; ಕೇಳಿಸಿಕೊಂಡವರು ಆತನ ವಾಕ್ಯದಂತೆ **ನಡೆಯುವವನು.** ಸತ್ಯವೇದವು ಕೇವಲ "ಕೇಳಿಸಿಕೊಳ್ಳು"ವದಕ್ಕೆ ಭಿನ್ನವಾಗಿ "ಮಾಡುವದರ" ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ. ಯಾಕೋಬನು ಹೇಳಿದ್ದೇನೆಂದರೆ, ಯಾವನಾದರೂ "ವಾಕ್ಯವನ್ನು ಕೇಳುವವನು ಮಾತ್ರವೇ ಆಗಿದ್ದು" ಮತ್ತು ಅದರ ಪ್ರಕಾರ "ನಡೆಯದಿದ್ದರೆ" ತನ್ನನ್ನು ತಾನೇ ಮೋಸಗೊಳಿಸಿಕೊಳ್ಳುತ್ತಾನೆ (ಯಾಕೋಬ 1:22-25). ದೇವರ ವಾಕ್ಯದಂತೆ ನಡೆದುಕೊಂಡವರು ಧನ್ಯರಾಗುವರು (ನೋಡಿರಿ ಪ್ರಕಟಣೆ 1:3).

ದೇವರ ವಾಕ್ಯಕ್ಕೆ ಯಾರು ವಿಧೇಯತೆಯುಳ್ಳವರಾಗಿರುತ್ತಾರೋ ಅವರನ್ನು ಯೇಸು ಒಬ್ಬ **ಬಂಡೆಯ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಯುಳ್ಳ ಮನುಷ್ಯ**ನಿಗೆ ಹೋಲಿಸಿದನು. "ಬಂಡೆ" (*petra*) ಎಂಬುದು "ಒಂದು ದೊಡ್ಡ ಬಂಡೆ" ಅಥವಾ "ಗಟ್ಟಿಯಾದ ಅಸ್ತಿವಾರದ ಬಂಡೆ." ಇಂಥಹಾ ಬಂಡೆಯಿಂದ ಸ್ಥಿರವಾದ, ಮುಂದೆ ಸರಿಸಲಾಗದ, ಮತ್ತು ಸುರಕ್ಷಿತವಾದ ಅಸ್ತಿವಾರವಾಗಿದೆ. ಬಿರುಗಾಳಿ ಈ ಬುದ್ಧಿವಂತನ ಮನೆ ಬೀಸುವಾಗ, ಇದು ಸ್ಥಿರವಾಗಿ ನಿಲ್ಲುವದು. ಬಂಡೆ ಮೇಲೆ ಕಟ್ಟಿದ ಕಟ್ಟಡವು ಯೇಸುವಿನ ಬೋಧನೆಗೆ ವಿಧೇಯರಾಗುವದಕ್ಕೆ ಸಮಾನವಾಗಿದೆ. ನಾವು ಯಾವಾಗ ಆತ್ಮಿಕ ಮನೆಗಳನ್ನು ಬಂಡೆಯ ಅಸ್ತಿವಾರದ ಮೇಲೆ ನಿಜವಾಗಿ ಕಟ್ಟುತ್ತೇವೋ, ನಮ್ಮ ನಂಬಿಕೆ ನಿಲ್ಲುತ್ತದೆ ಮತ್ತು ನಮ್ಮ ವಿರುದ್ಧವಾಗಿ ಜೋರಾಗಿ ಬೀಸಿದರು ನಾವು ಸ್ಥಿರವಾಗಿರುತ್ತೇವೆ.

**ವಚನ 25.** ಯೇಸು ಮುಂದುವರಿಸಿ, **ಕಟ್ಟಿದ ಮೇಲೆ ಮಳೆ ಸುರಿಯಿತು; ಹಳ್ಳಗಳು ಬಂದವು; ನಾಲ್ಕು ಕಡೆಯಿಂದ ಗಾಳಿ ಬೀಸಿ ಆ ಮನೆಗೆ ಬಡಿಯಿತು. ಆದಾಗ್ಯೂ ಅದರ ಅಸ್ತಿವಾರವು ಬಂಡೆಯ ಮೇಲಿದ್ದರಿಂದ ಅದು ಬೀಳಲಿಲ್ಲ.** ಗ್ರೀಕ್ ಶಬ್ದವು (*prosepesan … epesen*) ಮಾತಿನ ಚಮಾತ್ಕಾರವನ್ನು ಸೂಚಿಸುತ್ತದೆ. Leon Morris ರವರು ಈ ಭಾಗವನ್ನು ಈ ರೀತಿಯಾಗಿ ಅನುವಾದಿಸಿದ್ದಾರೆ: "ಮನೆಯ ವಿರುದ್ಧವಾಗಿ ಗಾಳಿ ಬೀಸಿತು, ಮತ್ತು ಇದು ಬೀಳಲಿಲ್ಲ."[37] ಯೇಸುವಿನ ವ್ಯಾಖ್ಯಾನದ ಹಿನ್ನಲೆಗೆ ಸಂಬಂಧಿಸಿದಂತೆ Mounce ಅವರು ಹೇಳಿದ್ದೇನೆಂದರೆ, "ಈ ಅಲಂಕಾರಿಕವು ಪಾಲೇಸ್ತೀನದಲ್ಲಿರುವ ಹವಾ ಗುಣದ ಪರಿಸ್ಥಿತಿಯಿಂದ ಬಂದಿರುವಂಥದ್ದಾಗಿದೆ. ಈ ದೇಶ ವರ್ಷಪೂರ್ತಿ ಒಣದಾಗಿಯೇ ಇರುತ್ತದೆ, ಆದರೆ ಮಳೆಗಾಲ ಪ್ರಾರಂಭವಾಗುವಾಗ, ತಕ್ಷಣದ ಪ್ರವಾಹ ಕೊರಕಲಾದ ಕಣಿವೆಯಲ್ಲಿ ಹರಿದು ಎಲ್ಲವನ್ನು ತೆಗೆದುಕೊಂಡು ಹೋಗುತ್ತದೆ."[38] ಪರ್ವತ ಪ್ರಸಂಗ ಯೇಸು ಮಾಡುವಾಗ, ಆತನು ಗಲಿಲಾಯ ಸಮುದ್ರದ ಹತ್ತಿರವಿದ್ದನು; ಮತ್ತು ಈ ಸನ್ನಿವೇಶವು ಈ ಕಥೆಯ ಹಿನ್ನಲೆಗಾಗಿ ಇನ್ನೊಂದು ಸಾಧ್ಯತೆಯನ್ನು ಕೊಡಬಹುದಾಗಿದೆ. Wilkins ರವರ ಪ್ರಸ್ತಾಪ ಹೀಗಿದೆ,

> ಜಲಪ್ರವಾಹದಿಂದ ಬಿದ್ದಿರುವ ಉಸುಬು ಗಲಿಲಾಯ ಸಮುದ್ರದ ದಡದಲ್ಲಿ ಬೇಸಿಗೆಯ ಬಿಸಿ ತಿಂಗಳಲ್ಲಿ ಮೇಲೆ ಕಠಿಣವಾದ ಬಿಸಿಯಿಂದ ಪ್ರತಿಧ್ವನಿಸುತ್ತದೆ. ಆದರೆ ಒಬ್ಬ ಜಾಣ ಮನೆಕಟ್ಟುವವನು ಇಂಥಹ ಮೇಲೆ ಪರಿಸ್ಥಿತಿಯಿಂದ ಅವನು ಮೂರ್ಖನಾಗುವದಿಲ್ಲ. ಅವನು ಆಳವಾಗಿ ಅಗಿಯುತ್ತಾನೆ. ಕೆಲವು ಸಾರಿ ಹತ್ತು ಅಡಿ ಆಳ ಮೇಲಿನಿಂದ ಕೆಳಗೆ ಬಂಡೆ ತಳಹದಿ ಮುಟ್ಟುವ ತನಕ ಅಗೆಯುತ್ತಾನೆ, ಮತ್ತು ಅವನ ಮನೆಗಾಗಿ ಅಲ್ಲಿ ಅಸ್ತಿವಾರ ಹಾಕುತ್ತಾನೆ [ಲೂಕ 6:46-49]. ಚಳಿಗಾಲದ ಮಳೆಬರುವಾಗ, ಯೋರ್ದಾನ ನದಿಯು ತುಂಬಿ ಹರಿದು ಸಮುದ್ರಕ್ಕೆ ಹೋಗುತ್ತದೆ, ಜಲಪ್ರವಾತದಿಂದ ಬಿದ್ದಿರುವ ಉಸುಬಿನ ಮೇಲೆ ಕಟ್ಟಿರುವ ಮನೆಗಳು ಸ್ಥಿರವಾದ ಅಸ್ತಿವಾರ ಇರುವದಿಲ್ಲ, ಆದರೆ ಬಂಡೆಯ ಅಸ್ತಿವಾರದ ಮೇಲೆ ಕಟ್ಟಿದ ಮನೆಗಳು ಪ್ರವಾಹ ಬಂದರು ಸ್ಥಿರವಾಗಿ ನಿಲ್ಲಲು ಸಮರ್ಥವಾಗಿವೆ.[39]

**ವಚನಗಳು 26, 27.** ಇದಕ್ಕೆ ಭಿನ್ನವಾಗಿ, ಈ ಸಾಮ್ಯದಲ್ಲಿ **ಬುದ್ಧಿಹೀನ ಉಸುಬಿನ ಮೇಲೆ ಮನೆಯನ್ನು ಕಟ್ಟಿಕೊಂಡನು.** ಉಸುಬು ಸ್ಥಿರವಾದದಲ್ಲ, ಅದು ನಿರಂತರವಾಗಿ

ಮುಂದೆ ಹೋಗುತ್ತಿರುತ್ತದೆ, ಮತ್ತು ಪ್ರವಾಹದಿಂದ ಸರಳವಾಗಿ ಕೊಚ್ಚಿಕೊಂಡು ಹೋಗುತ್ತದೆ. ಯಾವಾಗ ಆ ಮೂರ್ಖನ ಮನೆಗೆ ಗಾಳಿ ಬೀಸಿತೋ, **ಆಗ ಅದು ಧಡಮ್ಮನೆ ಕಡುಕೊಂಡು ಬಿತ್ತು.** ಜನರು ಕೆಲವು ಸಾರಿ "ದುರ್ಜನರ ವಂಚನೆಗೂ ಧರ್ಮಬೋಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು" (ಎಫೆಸ 4:14) ಆತ್ಮೀಕ ಮನೆಗಳನ್ನು ಉಸುಬಿನ ಮೇಲೆ ಕಟ್ಟುತ್ತಾರೆ. ಅವರ ವಿಶ್ವಾಸವು ಅಭಿಪ್ರಾಯಗಳ ಮೇಲೆ, ಊಹಾಪೋಹ ಗಳ ಮೇಲೆ, ಮತ್ತು ಕಟ್ಟುಕಥೆಗಳ ಮೇಲೆ ಆಧಾರಗೊಂಡಿರುತ್ತದೆ (ನೋಡಿರಿ 2 ತಿಮೋಥೆ 4:1-4). ನಮ್ಮ ಆತ್ಮೀಕ ಮನೆಗಳು ಪರಿಕ್ಷಿಸಲ್ಪಡುತ್ತವೆ ಎಂದು ಯೇಸು ಸ್ಪಷ್ಟಪಡಿಸಿದ್ದಾನೆ. ಯಾರು ಬಂಡೆಯ ಮೇಲೆ ಮನೆ ಕಟ್ಟಿದ್ದಾರೋ ಅವರು ಅಂತಿಮ ನ್ಯಾಯತೀರ್ಪಿನದಂದು ನಿಂತುಕೊಳ್ಳುವರು. ಯಾರು ಸ್ಥಿರವಿಲ್ಲದ ಆ ಉಸುಬಿನ ಮೇಲೆ ಮನೆ ಕಟ್ಟುವರೋ ಅವರು "ಆ ದಿನ"ದಂದು ನಿಂತುಕೊಳ್ಳಲು ಆಗುವದಿಲ್ಲ (ಕೀರ್ತನೆ 1:6; 127:1; ಮತ್ತಾಯ 15:13).

## ಜನಸಮೂಹದ ಅತ್ಯಾಶ್ಚರ್ಯ (7:28, 29)

**28ಯೇಸು ಈ ಮಾತುಗಳನ್ನು ಹೇಳಿ ಮುಗಿಸಿದ ಮೇಲೆ ಆ ಜನರ ಗುಂಪುಗಳು ಆತನ ಉಪದೇಶಕ್ಕೆ ಅತ್ಯಾಶ್ಚರ್ಯಪಟ್ಟವು. 29ಯಾಕೆಂದರೆ ಆತನು ಅವರ ಶಾಸ್ತ್ರಿಗಳಂತೆ ಉಪದೇಶ ಮಾಡದೆ ಅಧಿಕಾರವಿದ್ದವನಂತೆ ಅವರಿಗೆ ಉಪದೇಶಮಾಡುತ್ತಿದ್ದನು.**

**ವಚನ 28. ಯೇಸು ಈ ಮಾತುಗಳನ್ನು ಹೇಳಿ ಮುಗಿಸಿದ ಮೇಲೆ** ಎನ್ನುವ ವಾಕ್ಯಗಳು ಅಥವಾ ಅದಕ್ಕೆ ಸಮವಾಗಿರುವ ಮಾತುಗಳು ಮತ್ತಾಯ ಸುವಾರ್ತೆಯಲ್ಲಿ ಐದು ಸಾರಿ ಕಾಣಿಸುತ್ತದೆ (7:28; 11:1; 13:53; 19:1; 26:1), ಯೇಸುವಿನ ಐದು ಉಪದೇಶದ ಭಾಗಗಳ ಮುಕ್ತಾಯವನ್ನು ಗುರುತಿಸಲಾಗಿದೆ. ಈ ಪ್ರಸಂಗದಲ್ಲಿ ಆತನ ಪೂರ್ಣ ಸಂದೇಶದ ಅಂಶಗಳೆಲ್ಲವು ಒಳಗೊಂಡಿರುತ್ತದೆ. ಆತನ ಸಂದೇಶದ ಉಳಿದ ಭಾಗಗಳನ್ನು ಇಡಿ ತನ್ನ ವೈಯಕ್ತಿಕ ಸೇವೆ ಮಾಡುವಾಗ ಹೇಳಿದ್ದಾನೆ.

**ವಚನ 29.** ಯೇಸುವಿನ ಪ್ರಸಂಗ ಕೇಳಿದ ಜನರು ಆತನ ಉಪದೇಶಕ್ಕೆ ಅತ್ಯಾಶ್ಚರ್ಯ ಪಟ್ಟರು. **ಆತನು ಅವರ ಶಾಸ್ತ್ರಿಗಳಂತೆ ಉಪದೇಶಮಾಡದೆ ಅಧಿಕಾರವಿದ್ದವನಂತೆ ಅವರಿಗೆ ಉಪದೇಶಮಾಡುತ್ತಿದ್ದನು.** "ಅಧಿಕಾರ" (*exousia*) ಎನ್ನುವ ಗ್ರೀಕ್ ಪದವು ಬಲದಿಂದ ಅಥವಾ ಅಧಿಕಾರದಿಂದ ಒಬ್ಬ ವ್ಯಕ್ತಿಯು ಆಳುವದನ್ನು ಸೂಚಿಸುತ್ತದೆ (ನೋಡಿರಿ 8:9; 9:6; 10:1; 21:23). ಯೇಸು ಈ ಮಾತನ್ನು ಮಹಾ ನಿಯೋಗದಲ್ಲಿ ಉಪಯೋಗಿಸಿದ್ದಾನೆ (28:18). ಶಾಸ್ತ್ರಿಗಳು ಮೊದಲಿನ ಯೆಹೂದ್ಯ ಪಂಡಿತರು ಬರೆದಿದ್ದ ವಿಷಯದಿಂದ ಉದ್ಧವಾದ ಭಾಗವನ್ನು ಹೇಳುವದರ ಮುಖಾಂತರ ಬೋಧಿಸುತ್ತಿದ್ದರು. ಅವರು ಪೂರ್ವನಿದರ್ಶನಗಳ ಮೂಲಕ ಉತ್ತೇಜನ ನೀಡದೆ ಅವರ ಆಲೋಚನೆಗಳನ್ನು ಹೇಳುವದಕ್ಕೆ ಭಯಪಡುತ್ತಿದ್ದರು. "ಮಾನವ ಇತಿಹಾಸದ ಸಂಭಾವ್ಯ ಸಮಸ್ಯೆಗಳ ಮೇಲೆ ಬಲಹೀನವಾದ, ಭಾವರಹಿತವಾದ ವ್ಯಾಖ್ಯಾನಗಳುಳ್ಳ ಯೆಹೂದ್ಯ ಟಾಲ್ಮಂಡ್‌ನಲ್ಲಿರುವ Mishna ಮತ್ತು Gemaraದಲ್ಲಿ ಈ ಚರ್ಚೆಗಳು ಸುರಕ್ಷಿತವಾಗಿಡಲಾಗಿವೆ"[40] ಎಂದು A. T. Robertson ಬರೆದಿದ್ದಾರೆ. ಯೆಹೂದ್ಯ ಬೋಧಕರಿಗೆ ಭಿನ್ನವಾಗಿ, ಯೇಸು ತನ್ನ ತೇಜಸ್ಸುಳ್ಳ, ವೈಯಕ್ತಿಕ, ಮತ್ತು ದೃಷ್ಟಾಂತಗಳುಳ್ಳ ಬೋಧನೆಗಳನ್ನು ಅಧಿಕಾರದಿಂದ ಕೂಡಿದ ದೇವರ ವಾಕ್ಯದಂತೆ ಬೋಧಿಸಿದನು (ನೋಡಿರಿ ಯೋಹಾನ 5:27; 10:18; 17:2). ಮಾನವನ ಅಧಿಕಾರವು ಆತನ ಬೋಧನೆಯನ್ನು ಬಲಪಡಿಸುವ ಅಗತ್ಯವಿರಲಿಲ್ಲ. ಆತನ ಅಧಿಕಾರವನ್ನು ಈ ಪ್ರಸಂಗದಲ್ಲಿ "ನಾನು ನಿಮಗೆ ಹೇಳುತ್ತೇನೆ" (5:18, 20, 22, 26, 28, 32, 34, 39, 44; 6:2, 5, 16, 25, 29) ಮತ್ತು "ಈ ನನ್ನ ಮಾತುಗಳು" (7:24, 26) ಎನ್ನುವಂಥಹಾ ಮುಖ್ಯ ವಾಕ್ಯಭಾಗಗಳಿಂದ ಒತ್ತಿ ಹೇಳಲಾಗಿದೆ.

## “ತೀರ್ಪು ಮಾಡಬೇಡಿರಿ” (7:1-5)

ಒಬ್ಬನು ಘೋರವಾದ ಪಾಪಗಳನ್ನು ಮಾಡುತ್ತಾ ಅಂಥದ್ದೆ ಮಾಡುವ ಇನ್ನೊಬ್ಬನ ಪಾಪಗಳನ್ನು ಖಂಡಿಸಿ ಕಪಟವಾದ ತೀರ್ಪುಮಾಡುವದನ್ನು ಯೇಸು ಖಂಡಿಸಿದರು. Mounce ರವರು ಈ ರೀತಿಯಾಗಿ ವಿವರಿಸಿದ್ದಾರೆ,

> ಮಾನವನ ಸ್ವಾಭಾವವು ನಮ್ಮ ಸ್ವಂತ ತಪ್ಪುಗಳನ್ನು ಲಕ್ಷವಿಟ್ಟು ಗಮನಿಸುವ ಬದಲಾಗಿ ಇತರರ ತಪ್ಪುಗಳನ್ನು ಎಚ್ಚರದಿಂದ ನೋಡುವದಕ್ಕೆ ಪ್ರೋತ್ಸಾಹ ನೀಡುತ್ತದೆ. ಅಂಹಭಾವದ ನೀತಿಯ ಮಟ್ಟದ ಆಧಾರದಿಂದ ಇತರರ ತಪ್ಪುಗಳನ್ನು ಅಳೆಯಲು ನಾವು ಕಾಯುತ್ತಿರುತ್ತೇವೆ ಹೇಗೂ ಆ ಅಳತೆ ನಮ್ಮ ಸ್ವಂತ ಜೀವನಕ್ಕೆ ಅನ್ವಹಿಸದೆ ಇರುವಂಥದಾಗಿರುತ್ತದೆ.[41]

ಇತರರ ವಿಷಯದಲ್ಲಿ ಯುಕ್ತವಾದ ಅಭಿಪ್ರಾಯ ಹೊಂದಿರಲು ನಾವು ಕೆಲವು ಮಾರ್ಗದರ್ಶನಗಳನ್ನು ಪಾಲಿಸಬೇಕು.

*ನಾವು ನಮ್ಮ ಸ್ವಂತ ಜೀವಿತವನ್ನು ಮೌಲ್ಯಮಾಪನ ಮಾಡಿಕೊಳ್ಳಬೇಕು.* ನಾವು ಇತರರಲ್ಲಿ ತಪ್ಪುಗಳನ್ನು ಕಂಡುಹಿಡಿಯುವ ಕಾರ್ಯಮಾಡುತ್ತಾ ಇರುವುದಾದರೆ ನಾವು ಮೊದಲು ನಮ್ಮನ್ನೆ ಕೇಳಿಕೊಳ್ಳಬೇಕು.

*ಒಬ್ಬ ವ್ಯಕ್ತಿಯ ಪ್ರಪಂಚವನ್ನು ಬದಲಾಯಿಸುವ ಮೊದಲು ಅವನೆ ಮೊದಲು ಬದಲಾಗ ಬೇಕು.* ನಮ್ಮನ್ನು ಇತರರು ಟೀಕಿಸುವಾಗ ಅದನ್ನು ಕೇಳಬೇಕು. ಅವರು ಟೀಕಿಸುವಾಗ ಅದರಲ್ಲಿ ಕೆಲವು ಸತ್ಯವಾದ ಮಾತುಗಳು ಇರಬಹುದು ಅದು ನಮಗೆ ಇನ್ನು ಉತ್ತಮ ಜನರಾಗಲು ಸಹಾಯಮಾಡುತ್ತವೆ. ಕಬ್ಬಿಣವು ಕಬ್ಬಿಣವನ್ನು ಹರಿತಮಾಡುವಂತ ಸಾಮರ್ಥ್ಯವುಳ್ಳದ್ದಾಗಿದೆ (ಜ್ಞಾನೋಕ್ತಿ 27:17).

*ನಾವು ಹೆಚ್ಚಾಗಿ ಮೊದಲ ಅಭಿಪ್ರಾಯಗಳನ್ನು ಮಾಡಬಾರದು.* ಸಾಮಾನ್ಯವಾಗಿ ಒಬ್ಬ ಮನುಷ್ಯನನ್ನು ತಿಳಿದುಕೊಳ್ಳಲು ಅಥವಾ ಅರ್ಥಮಾಡಿಕೊಳ್ಳಲು ಒಮ್ಮೆ ಬೇಟಿಯಾಗುವದು ಸಾಕಾಗುವದಿಲ್ಲ. ಕೆಲವು ಸಾರಿ ಮೊದಲನೇ ಅಭಿಪ್ರಾಯ ತಪ್ಪಾಗಿರಬಹುದು.

*ನಾವು ಮುಕ್ತಾಯಕ್ಕೆ ಹಾರಬಾರದು.* ನಾವು ಎಲ್ಲಾ ಅಂಶಗಳನ್ನು ಕ್ರೂಡಿಕರಿಸಲು ಪ್ರಯತ್ನಿಸಬೇಕು ಮತ್ತು ಇತರರ ಕುರಿತು ನಾವು ಕೇಳಿರುವ ವಿಷಯಗಳ ಮೇಲೆ ನಮ್ಮ ಅಂತಿಮ ಅಭಿಪ್ರಾಯವು ಇರಬಾರದು.

*ನಾವು ಬದಲಾವಣೆಯಿಲ್ಲದಂತಹಾ ಒಂದೇ ಮಾದರಿಯ ಜನರಾಗಿರಬಾರದು.* ಒಬ್ಬ ವ್ಯಕ್ತಿ ಅವನು ಅಥವಾ ಅವಳು ಜನಾಂಗ, ಲಿಂಗ ಅಥವಾ ಸಾಮಾಜಿಕ-ಆರ್ಥಿಕ ಮಟ್ಟದ ಆಧಾರದಲ್ಲಿ ತೀರ್ಪುಮಾಡುವದು ಉತ್ತಮವಾದದ್ದಲ್ಲ.

*ನಾವು ಅವರ ಮೇಲೆ ದೋಷವರಿಸುವ ಮೊದಲು ಜನರ ಪರಿಸ್ಥಿತಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು.* ಅವನು ಅಥವಾ ಅವಳು ತನ್ನ ಜೀವಿತದಲ್ಲಿ ಕಠಿಣವಾದ ಪರಿಸ್ಥಿತಿಗಳನ್ನು ಎದುರಿಸುತ್ತಾ ಇರಬಹುದು ಬಹುಶಃ ಆ ವ್ಯಕ್ತಿಯ ಪರಿಸ್ಥಿತಿಯಲ್ಲಿದ್ದರೆ ನಾವು ಸಹ ಹಾಗೆಯೇ ನಡೆಯುತ್ತಿರಬಹುದು.

*ನಾವು ಇತರರನ್ನು ವಿರೋಧಿಸುವಾಗ, ನಾವು ಮೊದಲು ನಮ್ಮ ಉದ್ದೇಶವನ್ನು ಮೌಲ್ಯಮಾಪನ ಮಾಡಿಕೊಳ್ಳಬೇಕು.* ನಾವು ಇತರರ ಆತ್ಮೀಕ ಜೀವನದ ಕುರಿತು ಚಿಂತಿಸುವವರಾಗಿದ್ದೇವಾ (ಗಲಾತ್ಯ 6:1-4), ಅಥವಾ ನಾವು ಅವರಿಗಿಂತಲೂ ಒಳ್ಳೆ ಯವರೆಂದು ತೋರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವಾ?

*ಮುಕ್ತಾಯ.* ಯೇಸುವಿನ ವೇಷಧಾರಣೆಯ ಕುರಿತ ದೃಷ್ಟಾಂತವು ಒಬ್ಬನು ಕಪಟ

ತನದಿಂದ ಇತರರನ್ನು ತೀರ್ಪುಮಾಡುವದು ನಮಗೆ ಎಚ್ಚರಿಕೆಯಂತೆ ಕಾರ್ಯಮಾಡುತ್ತದೆ.
David Stewart

## ಪರಿಪೂರ್ಣ ತಂದೆ (7:7-11)

ಯೇಸು ಭೂಲೋಕದ ತಂದೆಯಂದಿರನ್ನು ತೋರಿಸಿ, ಅವರು ಪರಿಪೂರ್ಣರಲ್ಲ ಮತ್ತು ಪಾಪದಿಂದ ಕೂಡಿದ್ದಾರೆ, ಆದರೂ ಸಹ ಅವರು ತಮ್ಮ ಮಕ್ಕಳಿಗೆ ಒಳ್ಳೆಯ ಬಹುಮಾನಗಳನ್ನೇ ಕೊಡುವರು. ಭೂಲೋಕದ ತಂದೆಯವರನ್ನು ನೋಡುವದರಿಂದ, ನಾವು ಪರಲೋಕದ ತಂದೆಯ ಪ್ರೀತಿಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು ಮತ್ತು ಪ್ರಾರ್ಥನೆಯಲ್ಲಿ ಆತನೊಂದಿಗೆ ನಮ್ಮ ಸಂಬಂಧವನ್ನು ತಿಳಿದುಕೊಳ್ಳಬಹುದು.

ಭೂಲೋಕದ ತಂದೆಯಂದಿರು ಇಂದಿನ ದಿನದಲ್ಲಿ ತಮ್ಮ ಮಕ್ಕಳಿಗೆ ಅವರ ಅವಶ್ಯಕತೆಗಳನ್ನು ಪೂರೈಸಲು ಹೆಚ್ಚಿನ ಬಲವನ್ನು ಹಾಕುವವರಾಗಿದ್ದಾರೆ. ಅವರಿಗೆ ಗೊತ್ತಿದೆ ಏನೆಂದರೆ ಜೀವನಕ್ಕೆ ಮೂಲಭೂತ ಅವಶ್ಯಕತೆ ಬೇಕು, ಅವುಗಳಲ್ಲಿ ಆಹಾರ, ಬಟ್ಟೆ, ಮತ್ತು ವಾಸಸ್ಥಳ ಇವುಗಳ ಅವಶ್ಯಕತೆ. ಅದಕ್ಕಿಂತಲೂ ಹೆಚ್ಚಾಗಿ, ತಂದೆಯಂದಿರು ತಮ್ಮ ಮಕ್ಕಳಿಗೆ ಶಿಕ್ಷಣದ ಮುಖಾಂತರ ಜ್ಞಾನವಂತರನ್ನಾಗಿ ಮಾಡುತ್ತಾರೆ. ಅವರು ಮಕ್ಕಳನ್ನು ಮನೆ ಕೆಲಸಗಳಿಗೆ ಸಹಾಯ ಮಾಡುತ್ತಾರೆ ಮತ್ತು ವಿಶೇಷ ಯೋಜನೆಗಳಲ್ಲಿ, ಸಂಘಟನೆಗಳಲ್ಲಿ, ಶಾಲೆಯ ಘಟಕಗಳಲ್ಲಿ ಅವರು ಸಹಾಯ ಮಾಡುತ್ತಾರೆ ಮತ್ತು ಅವರ ಪುಸ್ತಕ ಮತ್ತು ಮನೆಪಾಠ ಹೇಳಿಸಿಕೊಳ್ಳಲು ಹಣವನ್ನು ಕೊಡುತ್ತಾರೆ. ಅವರು ಕೆಲವು ಸಾರಿ ಮಕ್ಕಳು ವ್ಯಾಯಾಮ ಮಾಡುವದಲ್ಲಿ, ಕಾಲು ಒಡೆತ ಚೆಂಡನ್ನು ಆಡುವಾಗ ಇಲ್ಲವೆ ಚೆಂಡಾಟದಲ್ಲಿ ಅದನ್ನು ಹಿಂದುಗಡೆಯಿಂದ ಹಿಡಿದುಕೊಡಲು, ಬಾಸ್ಕೆಟ್ ಬಾಲ್ ಆಡುವಾಗ ಅವರಿಗೆ ಅಂದರೆ ಮಕ್ಕಳಿಗೆ ಈ ಎಲ್ಲಾ ರೀತಿಯಲ್ಲಿ ಆಡ ಆಡುವದರಲ್ಲಿ ಸಹಾಯ ಮಾಡುತ್ತಾರೆ. ತಂದೆಯಂದಿರು ತಮ್ಮ ಮಕ್ಕಳಿಗಾಗಿ ಸತ್ಯವೇದವನ್ನು ಓದಿ ಅವರು ಆತ್ಮೀಕವಾಗಿ ಅಭಿವೃದ್ಧಿ ಹೊಂದಲು ಸಹಾಯಮಾಡುತ್ತಾರೆ, ಅವರೊಂದಿಗೆ ಪ್ರಾರ್ಥನೆ, ಕ್ರೈಸ್ತರ ಮಾದರಿಯ ಜೀವಿತ ಜೀವಿಸುವದು, ಆರಾಧನೆಗಾಗಿ ಮಕ್ಕಳನ್ನು ಕರೆದುಕೊಂಡು ಹೋಗುವದು, ಮತ್ತು ಅವರಿಗೆ ಸತ್ಯವೇದದ ತರಗತಿಗಳಲ್ಲಿ ವಾಕ್ಯ ಬೋಧಿಸುವದು ಇದರಿಂದ ಅವರು ಆತ್ಮೀಕವಾಗಿ ಬೆಳೆಯಲು ಸಹಾಯ ಮಾಡುತ್ತಾರೆ. ಇಷ್ಟೆಲ್ಲಾವನ್ನು ತಮ್ಮ ಮಕ್ಕಳಿಗಾಗಿ ಈ ತಂದೆಯಂದಿರು ಮಾಡುವಾಗ ಪರಲೋಕದ ತಂದೆ ತನ್ನ ಮಕ್ಕಳ ಅನುಕೂಲಕ್ಕಾಗಿ ಆತನು ಇನ್ನೂ ಎಷ್ಟೋ ಹೆಚ್ಚಾಗಿ ಮಾಡುವನು?

ಭೂಲೋಕದ ತಂದೆಯಂತೆಯೇ, ನಮ್ಮ ಪರಲೋಕದ ತಂದೆ ನಮ್ಮ ವಿಷಯಗಳ ಕುರಿತು ಮತ್ತು ಅಗತ್ಯತೆಗಳ ಕುರಿತು ದೊಡ್ಡದ್ದಾಗಿರಲಿ ಮತ್ತು ಚಿಕ್ಕದ್ದಾಗಿರಲಿ ಎರಡು ವಿಷಯಗಳಲ್ಲಿ ಆತನು ಕಾಳಜಿವಹಿಸುತ್ತಾನೆ. ನಾವು ಕೇಳುವದಕ್ಕಿಂತ ಮುಂಚೆಯೇ ಆತನಿಗೆ ನಮ್ಮ ಅಗತ್ಯತೆ ತಿಳಿದಿದೆ. ನಮ್ಮ ಜೀವನದಲ್ಲಿ ಕೆಲವು ಸಾರಿ ಸಂಕಟಗಳನ್ನು ಎದುರಿಸುವಂತೆ ಅನುಮತಿಸುತ್ತಾನೆ, ಅದು ನಮ್ಮ ಒಳ್ಳೆಯದಕ್ಕೆ ಮತ್ತು ಆತ್ಮೀಕ ಬೆಳವಣಿಗೆಗೆ ಎಂದು ತಿಳಿದುಕೊಳ್ಳಬೇಕು. ಕೆಲವು ಸಾರಿ ನಾವು ಕೇಳದೆ ಇದ್ದರೂ ನಮ್ಮ ಅಗತ್ಯತೆಯನ್ನು ಕೊಡುವನು, ಮತ್ತು ನಾವು ಕೃತಜ್ಞತೆಗಳನ್ನು ಹೇಳಲು ಮರೆತಿದ್ದರು ಸಹ ಆತನು ಕೊಡುವದನ್ನು ಮುಂದುವರಿಸಿರುತ್ತಾನೆ. ಇತರ ಸಮಯಗಳಲ್ಲಿ ನಾವು ಆತನನ್ನು ಕೇಳಬೇಕೆಂದು ಬಯಸುತ್ತಾನೆ ಯಾಕೆಂದರೆ ನಾವು ಆತನನ್ನು ಹೆಚ್ಚಾಗಿ ನಂಬಬೇ ಕೆಂದು ಮತ್ತು ಆತನ ಮೇಲೆ ನಾವು ಆಶ್ರಯಿಸಬೇಕೆಂದು ಬಯಸುತ್ತಾನೆ. ನಾವು ಆತನು ಕೊಟ್ಟ ಆಶೀರ್ವಾದಗಳನ್ನು ಬಾಧ್ಯತೆಯಿಂದ ನಿರ್ವಹಿಸದೆ ಇದ್ದರೆ ಅವುಗಳನ್ನು ಹಿಂದಕ್ಕೆ ಪಡೆಯಬಹುದು. ಭೂಲೋಕದ ತಂದೆಯರಿಗಿಂತಲೂ ಅದ್ವಿತೀಯನಾಗಿದ್ದಾನೆ, ಹಾಗಿದ್ದರೂ, ಪರಲೋಕದ ನಮ್ಮ ತಂದೆ ಪರಿಪೂರ್ಣನು ಮತ್ತು ಮಿತಿಯಿಲ್ಲದ ಸಂಪನ್ಮೂಲಗಳನ್ನು

## ಒಂದು ಬಂಗಾರದ ನಿಯಮ (7:12)

"ಬಂಗಾರದ ನಿಯಮ"ವೆಂದು ಕರೆಯಲ್ಪಟ್ಟ ಯೇಸುವಿನ ಉಪದೇಶವು, "ಜನರು ನಿಮಗೆ ಏನೇನು ಮಾಡಬೇಕೆಂದು ಆಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ" (7:12) ಎಂದು ಹೇಳುತ್ತದೆ. ನಮ್ಮ ದಿನಚರಿಯ ಜೀವಿತದಲ್ಲಿ, ಈ ಬೋಧನೆಯಿಂದ ಅನೇಕ ಅನ್ವಹಿಸುವಿಕೆಗಳನ್ನು ನಾವು ಕಂಡುಕೊಳ್ಳಬಹುದು.

ಮೊದಲನೆಯದಾಗಿ, ಈ ವ್ಯಾಖ್ಯಾನದ ಸರಳತೆಯನ್ನು ಗಮನಿಸಿರಿ. ಇದು ಎಲ್ಲರೂ ವಿಧೇಯರಾಗುವಷ್ಟು ಸರಳವಾಗಿದೆ. ಇದು ವೈಯಕ್ತಿಕವಾಗಿ ಇತರರೊಂದಿಗೆ ನಡೆದುಕೊಳ್ಳುವ ಜವಾಬ್ದಾರಿಯನ್ನು ನಮ್ಮ ಮೇಲೆ ಹೊರಿಸುತ್ತದೆ, ಮತ್ತು ಅವರು ನಮ್ಮೆಡೆ ವರ್ತಿಸಿದ ಮೇಲೆ ನಿರ್ಧಾರಿಸಲ್ಪಡುವದಿಲ್ಲ. ಅವಶ್ಯಕವಾಗಿ, "ನನ್ನೆಡೆ ಹೇಗಾದರು ವರ್ತಿಸಿದರು ಪರವಾಗಿಲ್ಲ, ಆದರೆ ನೀನು ನನ್ನೆಡೆ ನಾನು ನಡಕೊಂಡಂತೆ ನೀನು ವರ್ತಿಸಬೇಕಾಗಿ ನಾನು ಮಾತ್ರ ನಿನ್ನನ್ನು ಮರ್ಯಾದೆ ಮತ್ತು ಗೌರವದಿಂದ ಉಪಚರಿಸುತ್ತೇನೆ."

ಎರಡನೆಯದಾಗಿ, ಈ ಹೇಳಿಕೆಯು ಯಾರನ್ನಾದರೂ ಮತ್ತು ಯಾವುದಾದರೂ ಬಿಟ್ಟು ಹೇಳಲಿಲ್ಲ, ಯಾಕೆಂದರೆ ಇದು "ಎಲ್ಲಾದರಲ್ಲಿ" ಎಂದು ಹೇಳಿದೆ. ವ್ಯಕ್ತಿ ಅಥವಾ ಉಪಚರಿಸುವ ಸಂಪ್ರದಾಯವು ಅದು ಬಿಡಲ್ಪಡುತ್ತದೆ; ನಮಗೆ ವಿರೋಧಿಸಿದವರ ಮತ್ತು ಸರಿಯಾಗಿ ಉಪಚರಿಸದ ವಿಷಯ ಒಳಗೊಳ್ಳುತ್ತದೆ. ನಮ್ಮ ಕರ್ತನು ನಮಗಾಗಿ ಉದಾಹರಣೆಯಾಗಿ ಇಟ್ಟಿದ್ದಾನೆ ನಮಗೆ ವೈರಿಗಳಾಗಿದ್ದಾಗಲೂ ಅವರಿಗೆ ನಾವು ಹೇಗೆ ಉಪಚರಿಸಬೇಕು ಎಂದು ಹೇಳಿದ್ದಾನೆ (ಲೂಕ 23:34; 1 ಪೇತ್ರ 2:21).

ಮೂರನೆಯದಾಗಿ, ಈ ಹೇಳಿಕೆಯು ಸಲಹೆಗಿಂತಲೂ ಹೆಚ್ಚಿನದ್ದಾಗಿದೆ. ಇದು ಒತ್ತಾಯದ ಪ್ರಕಟಣೆಯಾಗಿದೆ, ಆಜ್ಞಾಪೂರ್ವಕವಾದ ನಡವಳಿಕೆ ಯೇಸು ತನ್ನ ಹಿಂಬಾಲಕರಿಗೆ ಕೊಟ್ಟಿದ್ದಾನೆ. ಇದನ್ನು ಬೇರೆ ಮಾರ್ಗವಾಗಿ ಅರ್ಥಮಾಡಿಕೊಳ್ಳುವದು ಅಸಾಧ್ಯವಾಗಿದೆ. ಇದು ಎಷ್ಟೆ ಕಷ್ಟವಾದರೂ ಚಿಂತೆಯಿಲ್ಲ, ಈ ವಿಧಿ ರೂಪಕಕ್ಕೆ ನಾವು ಬದ್ಧರಾಗಲೇ ಬೇಕು.

## ಜೀವಿಸುವದಕ್ಕಾಗಿ ನಿಯಮಗಳು (7:12)

ಜನರು ಬಂಗಾರದ ನಿಯಮದಂತೆ ಜೀವಿಸುವಾಗ, ನಮ್ಮ ದಿನಗಳು ಪ್ರಮಾಣಿಕತೆಯಿಂದ ಮತ್ತು ಕರುಣೆಯಿಂದ ತುಂಬಿರುತ್ತವೆ. ಹಾಗಿದ್ದರೂ, ಇದನ್ನು ಜನರಿಗೆ ಹೇಳಲಾಗಿದೆ ಅವರು ಮುಖ್ಯವಾಗಿ ಒಂದರಿಂದಲೇ ಏಳು ನಿಯಮಗಳ ಪ್ರಕಾರ ಜೀವಿಸಬೇಕು.

1. *ಕೆಸರಿನ ನಿಯಮವು* ಎಲ್ಲವುಗಳಲ್ಲಿ ಕೆಳಮಟ್ಟದ್ದಾಗಿದೆ. ಇದು ಸ್ವಾರ್ಥಿಯ ಜೀವನ ಶೈಲಿಯಾಗಿದೆ ಮತ್ತು ಪ್ರಸಿದ್ಧಿಯಾದವರು ಈ ರೀತಿಯಾಗಿ ಇರುವರು. ಯಾರು ಈ ನಿಯಮವನ್ನು ಪಾಲಿಸುತ್ತಾರೋ ಅವರು ಇತರರನ್ನು ಆಳುತ್ತಾರೆ ಅಥವಾ ನಾಶಮಾಡುತ್ತಾರೆ.

2. *ಅಂಟು ಮಣ್ಣಿನ ನಿಯಮ.* "ವಿಲಾಸಿ ಆಟಗಾರನಂತೆ," ಬೋಗಿಸುವವರಂತೆ, ಪ್ರಾಪಂಚಿಕ ಜೀವನ ಶೈಲಿಯಂತಿರುತ್ತದೆ. ಇದು ಬೋಗವಿಲಾಸಿಗಳಾದ ಎಫಿಕ್ಯೂರಿಯನ್ಸ್ ತತ್ವವಾಗಿದೆ - "ನಾಳೆ ನೀನು ಸಾಯುವದರಿಂದ ತಿನ್ನು ಕುಡಿ ಮತ್ತು ಸಂತೋಷವಾಗಿರು."

3. *ಕಬ್ಬಿಣದ ನಿಯಮ.* ಈ ನಿಯಮವು "ಬಲವೇ ನನ್ನ ಹಕ್ಕು." ಈ ತತ್ವವು ಯೇಸುವಿನ ಒಳ್ಳೆ ಸಮಾರ್ಯದವನ ಸಾಮ್ಯದಲ್ಲಿ ಪ್ರಯಾಣಿಸುವಾಗ ಕೆಲವರು ಹೊಡೆದು ಅವನನ್ನು ಸುಲಿಗೆ ಮಾಡುತ್ತಾರೆ ಆ ಸುಲಿಗೆ ಮಾಡುವವರ ತತ್ವವಾಗಿದೆ.

4. *ಹಿತ್ತಾಳೆಯ ನಿಯಮ.* ಕ್ರಿಯೆ ಮತ್ತು ಪ್ರತಿಕ್ರಿಯೆಯ ನಿಯಮವಾಗಿದೆ: "ಅವರು ನಿನಗೆ

ಉಪಚರಿಸಿದಂತೆ ನೀನು ಅವರನ್ನು ಉಪಚರಿಸು"; "ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು." ಇದನ್ನು "ಅಧಿಕೃತ ನಿಯಮ"ವೆಂತಲೂ ಕರೆಯುತ್ತಾರೆ.

5. *ಬೆಳ್ಳಿಯ ನಿಯಮವು.* ಅದು "ನಕರಾತ್ಮಕ ಒಳ್ಳೆಯತನದ್ದಾಗಿದೆ." ಈ ನಿಯಮಕ್ಕೆ ಬದ್ಧರಾಗಿ ನಡಿಯುವವರು ಯಾರಿಗೂ ಕೆಡನ್ನು ಮಾಡುವದಿಲ್ಲ ಅವರು ಮಾಡದೆ ಇದ್ದರೂ ಇವರು ಮಾತ್ರ ಯಾರಿಗಾದರು ಸರಿ ಒಳ್ಳೆಯದನ್ನೇ ಮಾಡುತ್ತಾರೆ.

6. *ಬಂಗಾರದ ಬಣ್ಣ ಲೇಪಿಸಿದ ನಿಯಮ.* ಇದು (ಬಂಗಾರದ) ಸರ್ವಶ್ರೇಷ್ಟ ನಿಯಮಕ್ಕೆ ತದ್ವಿರುದ್ಧವಾಗಿರುತ್ತದೆ: "ಅವರು ನಿನಗೆ ಮಾಡಲು ಆಗದೆ ಇರುವದನ್ನು ನೀನು ಅವರಿಗೆ ಮಾಡದೆ ಇರು." ಈ ನಿಯಮವನ್ನು ಪಾಲಿಸುವಾಗ ಧಾರ್ಮಿಕ ವ್ಯಕ್ತಿಯಂತೆ ವರ್ತಿಸಬಾರದು.

7. *ಬಂಗಾರದ ನಿಯಮ.* ಈ ನಿಯಮಗಳಲ್ಲಿ ಕೊನೆಯ ನಿಯಮವಾಗಿದೆ. ಇದನ್ನು ಕ್ರೈಸ್ತರಲ್ಲದವರು ಸಹ ಇದರ ನೀತಿಯ ಆಲೋಚನೆಯನ್ನು ಒಪ್ಪಿಕೊಳ್ಳುತ್ತಾರೆ. ಯುನೈಟೆಡ್ ಸ್ಟೇಟನ ಅಧ್ಯಕ್ಷರು ಆಗಿದ್ದಂತಹ Herbert Hoover ಹೇಳಿದ್ದಾರೆ, "ಮಾನವರ ಬಲ ಹೀನತೆಯ ಕಾರಣದಿಂದ, ಈ ಬಂಗಾರದ ನಿಯಮ ದಿನಾಲು ಮೀರುವಂತವರಾಗಿದ್ದಾರೆ, ಆದರೆ ಈ ಶ್ರೇಷ್ಟ ನಿಯಮವು ಸಾಮಾನ್ಯವಾದ ಒಳ್ಳೆಯ ಸೂತ್ರವಾಗಿದೆ, ನಾವಿರುವ ಆಧುನಿಕ ಪ್ರಪಂಚದಲ್ಲಿ ಇದರಲ್ಲಿ ಮುನ್ನುಗ್ಗುವ ಮತ್ತು ಆಳವಾಗಿ ವಿಚಾರಿಸುವ ವಿಷಯಗಳನ್ನು ತಿದ್ದುಪಡಿಮಾಡುತ್ತದೆ."[42] ಈ ಲೋಕದಲ್ಲಿರುವ ಪ್ರತಿಯೊಬ್ಬರು ಈ ನಿಯಮ ಪಾಲಿಸುವಂತೆ ಮಾಡಲು ಸಾಧ್ಯವಿಲ್ಲ; ಆದರೆ ಯೇಸುವಿನಲ್ಲಿ ನಂಬಿಕೆ ಇಟ್ಟಂತವರನ್ನು ಇದರಲ್ಲಿ ತೊಡಗಿಸಿಕೊಳ್ಳಬಹುದು ಅಭ್ಯಾಸ ಮಾಡಬಹುದು, ಇದು ಎಂಥಹಾ ಬಲಾವಣೆ![43]

## ಆಯ್ಕೆಯನ್ನು ಮಾಡುವದು (7:13-27)

ನಾವು ಆಯ್ಕೆ ಮಾಡುವದನ್ನು ದಿನಾಲು ಎದುರಿಸುತ್ತೇವೆ. ಕೆಲವು ಸಾರಿ ನಾವು ಒಳ್ಳೆಯ ಮತ್ತು ಉತ್ತಮದ ಮಧ್ಯದಲ್ಲಿ ಆರಿಸಿಕೊಳ್ಳುತ್ತೇವೆ. ಇನ್ನಿತರೆ ಸಮಯದಲ್ಲಿ ನಾವು ಕೆಳದರ್ಜೆಯ ಎರಡು ಕೆಟ್ಟತನ ಮಧ್ಯದಲ್ಲಿ ಆರಿಸಿಕೊಳ್ಳಬಹುದು. ಈ ಸದ್ಯದ ವಾಕ್ಯಭಾಗದ ಹಿನ್ನಲೆಯಲ್ಲಿ ಒಳ್ಳೆಯ ಮತ್ತು ಕೆಟ್ಟದರ ಮಧ್ಯದಲ್ಲಿ ಆರಿಸಿಕೊಳ್ಳಬೇಕೆಂದು ಸ್ಪಷ್ಟವಾಗಿ ಹೇಳುತ್ತದೆ. ನಾವು ಮುಂದೆ ಬರುವಂಥವುಗಳನ್ನು ಆರಿಸಿಕೊಳ್ಳಲೇಬೇಕು:

1. ಇಕ್ಕಟ್ಟಾದ ಮಾರ್ಗ ಅಥವಾ ವಿಶಾಲವಾದ ಮಾರ್ಗದಲ್ಲಿ ನಡೆಯುವದು (7:13, 14);
2. ಒಳ್ಳೆಯ ಅಥವಾ ಕೆಟ್ಟ ಫಲವನ್ನು ಉತ್ಪಾದಿಸುವದು (7:15-20);
3. ವಿಧೇಯತೆಯಿಂದ ಅಥವಾ ಅವಿಧೇಯತೆಯಿಂದ ಇರುವದು (7:21-23);
4. ಬಂಡೆಯ ಮೇಲೆ ಅಥವಾ ಉಸುಬಿನ ಮೇಲೆ ಕಟ್ಟುವದು (7:24-27).

## ಸರಿಯಾದ ಮಾರ್ಗವನ್ನು ಆಯ್ದುಕೊಳ್ಳುವದು (7:13, 14)

ಈ ವಚನಗಳಲ್ಲಿ, ಯೇಸು ಗುರುತಿಸಿರುವ ಜೀವನದ ಬೇರೆ ಬೇರೆ ದಿಕ್ಕಿಗೆ ನಡೆಸುವ ಮಾರ್ಗಗಳ ಮಧ್ಯದಲ್ಲಿ ಒಂದನ್ನು ಆರಿಸಿಕೊಳ್ಳುವದರ ಕುರಿತು ವಿವರಿಸಿದ್ದಾನೆ. ಈ ಎರಡರಲ್ಲಿ ಒಂದನ್ನು ಆರಿಸಿಕೊಂಡು ನಡೆಯುವ ಆಯ್ಕೆ ಸಂಪೂರ್ಣವಾಗಿ ನಮಗೆ ಬಿಡಲ್ಪಟ್ಟಿದೆ. ಸೃಷ್ಠಿ ಪ್ರಾರಂಭಗೊಂಡಂದಿನಿಂದ - ಎದೇನ್ ತೋಟದಲ್ಲಿ - ಆದಮ ಮತ್ತು ಹವ್ವರೊಂದಿಗೆ ಪ್ರಾರಂಭವಾಯಿತು - ದೇವರು ಜನರು ತಮ್ಮ ಸ್ವಂತ ಆಯ್ಕೆಮಾಡಿಕೊಳ್ಳಲು ಅವರಿಗೆ ಅವಕಾಶಕೊಟ್ಟನು.

ಕ್ರೈಸ್ತ ಜೀವಿತವು ಅದು ಒಂದು "ಮಾರ್ಗ" ಎಂದು ವರ್ಣಿಸಲಾಗಿದೆ. ನಿಜವಾಗಿಯೂ, ಆದಿ ಸಭೆಯು ಇಂಥಹ ಹೆಸರಿನಿಂದ ಗುರುತಿಸಲ್ಪಟ್ಟಿತ್ತು (ಅಪೊಸ್ತಲರ ಕೃತ್ಯಗಳು 9:2;

24:14). "ನೀತಿಯ ಮಾರ್ಗ" ಮತ್ತು "ನಾಶನ ಮಾರ್ಗ" ಗಳನ್ನು ವಿವರಿಸಿ (ಕೀರ್ತನೆ 1:1-6) ಕೀರ್ತನೆಗಾರನು ಆಯ್ಕೆ ಮಾಡಿಕೊಳ್ಳಲು ಸೂಚಿಸಿದ್ದಾನೆ. ಕ್ರಿಸ್ತನ ಯುಗವು ಬರುತ್ತದೆಂದು ಪ್ರವಾದನೆಯಲ್ಲಿ ತಿಳಿಸಿದ್ದಾನೆ, ಯೆಶಾಯನು ಹೀಗೆ ಬರೆದಿದ್ದಾನೆ,

> ಅಲ್ಲಿ ರಾಜಮಾರ್ಗವಿರುವದು, ಹೌದು (ಹೋಗಿ ಬರುವ) ದಾರಿ; ಅದು ಪರಿಶುದ್ಧ ಮಾರ್ಗ ಎನಿಸಿಕೊಳ್ಳುವದು; ಯಾವ ಅಶುದ್ಧನೂ ಅಲ್ಲಿ ನಡೆಯನು, ಅದು ದೇವ ಜನರಿಗಾಗಿಯೇ ಇರುವದು, ಅಲ್ಲಿ ಹೋಗುವ ಮೂಢನೂ ದಾರಿ ತಪ್ಪನು (ಯೆಶಾಯ 35:8).

ಓದುಗರ ಆತ್ಮೀಕ ಪ್ರೋತ್ಸಾಹ ಮಾಡುವದಕ್ಕಾಗಿ ಇಬ್ರಿಯಾ ಬರಹಗಾರನು ಹೀಗೆ ಹೇಳುತ್ತಾನೆ, "ಜೋಲು ಬಿದ್ದ ಕೈಗಳನ್ನು ನಡುಗುವ ಮೊಣಕಾಲುಗಳನ್ನು ಸುದಾರಿಸಿಕೊಳ್ಳಿರಿ; ನಿಮ್ಮ ಕಾಲುಗಳಿಂದ ನೆಟ್ಟಗೆ ಮುಂದೆ ನಡೆಯಿರಿ ಹೀಗೆ ಮಾಡಿದರೆ ಕುಂಟಕಾಲು ಉಳುಕಿಹೋಗದೆ ವಾಸಿಯಾಗುವದು" (ಇಬ್ರಿಯ 12:12, 13).

ಇಸ್ರಾಯೇಲ್ಯರು ಕಾನಾನ್ ಪ್ರವೇಶಿಸಲು ಸಿದ್ಧತೆ ಮಾಡುತ್ತಿದ್ದಂತೆಯೇ, ಮೋಶೆ ಎಲ್ಲಾ ಜನರನ್ನು ಒಟ್ಟಿಗೆ ಸೇರಿಸಿ ಅವರಿಗೆ ಮುಖ್ಯ ಸಂದೇಶವನ್ನು ಕೊಟ್ಟನು ಮತ್ತು ತಾನು ವಾಗ್ದಾನ ಮಾಡಿದ ದೇಶಕ್ಕೆ ಬರುತ್ತಾ ಇಲ್ಲಾ ಎಂದು ಹೇಳಿದನು (ಧರ್ಮೋಪದೇಶಕಾಂಡ 31:2). ಆತನ ಕೊನೆಯ ಹೇಳಿಕೆಯಲ್ಲಿ, ಭಾವನಾತ್ಮಕವಾದ ಅಂಶದೊಂದಿಗೆ ದೇವರಿಗೆ ನಂಬಿಗಸ್ತರಾಗಿ ಇರುವಂತೆ ಹೇಳಿದನು (ಧರ್ಮೋಪದೇಶಕಾಂಡ 30:19).

ಹತ್ತಿರದಲ್ಲಿಯೇ, ಆತನು ಮರಣಹೊಂದುವ ಮೊದಲು, ಯೆಹೋಶುವನು ಅವನಂತೆ ಇಸ್ರಾಯೇಲ್ಯರನ್ನು ಶರತ್ತು ಬದ್ಧವಾಗಿ ಆಹ್ವಾನ ಮಾಡಿ ಹೇಳುತ್ತಿದ್ದಾನೆ,

> ಹೀಗಿರುವದರಿಂದ ನೀವು ಯೆಹೋವನಲ್ಲಿ ಭಯಭಕ್ತಿಯುಳ್ಳವರಾಗಿರ್ರಿ; ಆತನನ್ನು ಪೂರ್ಣ ಮನಸ್ಸಿನಿಂದಲೂ ಯಥಾರ್ಥಚಿತ್ತದಿಂದಲೂ ಸೇವಿಸಿರಿ. ನಿಮ್ಮ ಪೂರ್ವಿಕರು (ಯೂಪ್ರೆಟೀಸ್) ನದಿಯ ಆಚೆಯಲ್ಲಿಯೂ ಐಗುಪ್ತದಲ್ಲಿಯೂ ಪೂಜಿಸುತ್ತಿದ್ದ ದೇವತೆಗಳನ್ನು ನಿಮ್ಮಲ್ಲಿಂದ ತೆಗೆದುಹಾಕಿರಿ; ಯೆಹೋವನನ್ನೇ ಸೇವಿಸಿರಿ. ಯೆಹೋವನನ್ನು ಸೇವಿಸುವದು ನಿಮಗೆ ಸರಿಕಾಣದಿದ್ದರೆ ಯಾರನ್ನು ಸೇವಿಸಬೇಕೆಂದಿದ್ದೀರಿ? ಈ ಹೊತ್ತೇ ಆರಿಸಿಕೊಳ್ಳಿರಿ. ನಿಮ್ಮ ಪೂರ್ವಿಕರು (ಯೂಪ್ರೆಟೀಸ್) ನದಿಯ ಆಚೆಯಲ್ಲಿ ಸೇವಿಸುತ್ತಿದ್ದ ದೇವತೆಗಳೋ ಈ ದೇಶದ ಮೂಲ ನಿವಾಸಿಗಳಾದ ಅಮೋರಿಯರ ದೇವತೆಗಳೋ, ಹೇಳಿರಿ. ನಾನು ನನ್ನ ಮನೆಯವರೂ ಯೆಹೋವನನ್ನೇ ಸೇವಿಸುವೆವು ಅಂದನು (ಯೆಹೋಶುವ 24:14, 15; NIV).

ಉತ್ತರ ರಾಜ್ಯವು ಸಂಪೂರ್ಣವಾಗಿ ಬಾಳನನ್ನು ಆರಾಧಿಸಲು ಪ್ರಾರಂಭಿಸಿದರೋ, ಎಲೀಯನು ಕಾರ್ಮೆಲ್ ಬೆಟ್ಟದ ಮೇಲೆ ಬಾಳನ ಪ್ರವಾದಿಗಳನ್ನು ಸಂದಿಸಿದನು. ಇಸ್ರಾಯೇಲರಲ್ಲಿ ಅವರ ಧರ್ಮದಲ್ಲಿ ಆಗುವ ಪರಿಸ್ಥಿತಿಯನ್ನು ಖಂಡಿಸಿದನು ಮತ್ತು ಹೀಗೆ ಕೇಳಿದನು, ನೀವು ಎಷ್ಟರವರೆಗೆ ಎರಡು ಮನಸ್ಸುಳ್ಳವರಾಗಿರುವಿರಿ? ಯೆಹೋವನು ದೇವರಾಗಿದ್ದರೆ ಆತನನ್ನೇ ಹಿಂಬಾಲಿಸಿರಿ; ಆದರೆ ಬಾಳನು ದೇವರಾಗಿದ್ದರೆ ಅವನನ್ನೆ ಹಿಂಬಾಲಿಸಿರಿ ಎಂದು ಹೇಳಿದನು (1 ಅರಸುಗಳು 18:21).

ಯೆರೆಮೀಯನು ಯೆಹೂದ ಜನರನ್ನು ಅವರ ಮುಂದೆ ಇರುವ ಸಂಗತಿಗಳನ್ನು ಆರಿಸಿಕೊಳ್ಳಲು ಜ್ಞಾಪಿಸಿದನು: ಅವರು ಯೆರೂಸಲೇಮಿನಲ್ಲಿಯೇ ಉಳಿಯಬೇಕೋ ಇಲ್ಲವೆ ಅದರೊಂದಿಗೆ ನಾಶವಾಗಬೇಕೋ ಅಥವಾ ದೇವರ ನ್ಯಾಯತೀರ್ಪುಬರುವಂತೆಯೇ ಇಲ್ಲಿಂದ ಪಲಾಯಾನಮಾಡಬೇಕೋ. ಆತನು ಹೀಗೆ ಬರೆದಿದ್ದಾನೆ, "ಇಗೋ, ನಾನು ಜೀವಿಸುವ ಮಾರ್ಗವನ್ನು ಸಾಯುವ ಮಾರ್ಗವನ್ನು ನಿಮ್ಮ ಮುಂದೆ ಇಟ್ಟಿದ್ದೇನೆ" (ಯೆರೆಮೀಯ 21:8).

ಪ್ರಾರಂಭದಿಂದಲೂ, ದೇವರು ಸರಳವಾದ ಎರಡು ಆಯ್ಕೆಗಳನ್ನು ಜನರಿಗೆ ಕೊಟ್ಟಿದ್ದಾನೆ. ನಾವು ದೇವರಿಗೆ ವಿಧೆಯರಾಗುವದು ಅಥವಾ ಅವಿಧೆಯರಾಗುವದನ್ನು ಆರಿಸಿಕೊಳ್ಳಬಹುದು. ದೇವರಲ್ಲಿಗೆ ಹೋಗಲು ಅನೇಕ ಮಾರ್ಗಗಳಿಲ್ಲ; ಅಲ್ಲಿ ಒಂದೆ ಒಂದು ಮಾರ್ಗವಿದೆ (ಯೋಹಾನ 14:6). ಪರಲೋಕಕಕ್ಕೆ ಹೋಗಲು ಅನೇಕ ಮಾರ್ಗಗಳು, ರಸ್ತೆಗಳು ಇಲ್ಲಾ ಅಲ್ಲಿ ಒಂದೇ ಒಂದು ಮಾರ್ಗವಿದೆ (7:14). ನಾವು ನಿಜವಾದ ಧರ್ಮ ಮತ್ತು ಸುಳ್ಳಾದ ಧರ್ಮದ ಮಧ್ಯದಲ್ಲಿ ಒಂದನ್ನು ಆರಿಸಿಕೊಳ್ಳಬೇಕು (15:9). ಪರ್ವತ ಪ್ರಸಂಗವು ದೇವರ ನೀತಿಯು ನಿತ್ಯಜೀವಕ್ಕೆ ನಡಿಸುತ್ತದೆ ಮತ್ತು ಶಾಸ್ತ್ರಿಗಳ ಮತ್ತು ಫರಿಸಾಯರಂತಹ ಕಪಟನೀತಿಯು ನಿತ್ಯ ಮರಣಕ್ಕೆ ನಡೆಸುತ್ತದೆ ಎಂಬುವ ಎರಡು ಭಿನ್ನವಾದ ವಿಷಯಗಳೊಂದಿಗೆ ಇದೆ (5:20).

## ವಿಶಾಲ ಮಾರ್ಗ ಮತ್ತು ಇಕ್ಕಟ್ಟಾದ ಮಾರ್ಗ (7:13, 14)

"ವಿಶಾಲ" ಮಾರ್ಗವು ಸಹನ ಶಕ್ತಿಗೆ ಸಮವೆಂದು ಹೇಳಲಾಗುತ್ತದೆ. ಇನ್ನೊಂದು ಧರ್ಮದ ವಿಷಯದಲ್ಲಿ ತಾಳ್ಮೆಯಿಲ್ಲದಿರುವದು ಅದು ದುಷ್ಟಕಾರ್ಯವಾಗಿದೆ ಎಂದು ಅನೇಕ ಜನರು ನಂಬುತ್ತಾರೆ. ನಿರ್ದಿಷ್ಟವಾಗಿ, ಕೆಲವು ಸಮಯಗಳಲ್ಲಿ ಇತರೆ ಧರ್ಮದ ವಿಷಯದಲ್ಲಿ ತಾಳ್ಮೆ ಇಲ್ಲದಿರುವದು ಕೆಟ್ಟಕಾರ್ಯವಾಗಿದೆ; ಆದರೆ ದೇವರು ದೇವದೂಷಣೆಗೆ ಒಳಗಾದಾಗ, ಸತ್ಯವು ಆಕ್ರಮಣಕ್ಕೆ ಇಡಾಗುವಾಗ, ದೇವರ ವಾಕ್ಯದ ಪರವಾಗಿ ಅಭಿಪ್ರಾಯವು ಬರುವಾಗ, ಸಹನೆ ಇಲ್ಲದಿರುವದು ಸರಿಯಾದದ್ದಾಗಿದೆ. ನಾವು ಕೀಳು ಮನಸ್ಸುಳ್ಳವರಾಗಿರಬಾರದು ಅಥವಾ ದ್ವೇಷಿಸುವವರಾಗಿರಬಾರದು, ಆದರೆ ಸತ್ಯವೇದ ಏನು ಕಲಿಸುತ್ತದೋ ಅದಕ್ಕೆ ಸ್ಥಿರವಾಗಿ ನಿಂತುಕೊಳ್ಳಬೇಕು ಮತ್ತು ತಪ್ಪಾದ ನಡವಳಿಕೆಗಳು ಮತ್ತು ನಂಬಿಕೆಗಳನ್ನು ತಿರಸ್ಕಾರ ಮಾಡಬೇಕು. ಇತರೆ ದೇವರುಗಳ ಬಗ್ಗೆ ಯೇಸು ಸಹಿಸಿಕೊಳ್ಳಲಿಲ್ಲ (4:10), ರಾಜನಿಷ್ಟೆ ವಿಭಾಗವಾಗುವದು (12:30), ಮತ್ತು ದೇವರಲ್ಲಿಗೆ ಹೋಗಲು ಬೇರೆ ಮಾರ್ಗಗಳನ್ನು ಬೋಧಿಸುವವರ ವಿಷಯದಲ್ಲಿ ಆತನು ಸಹಿಸಿಕೊಳ್ಳಲಿಲ್ಲ (ಯೋಹಾನ 10:1-10; 14:6).

ದೇವರ ಮಾರ್ಗವು ಇಕ್ಕಟ್ಟಾಗಿದೆ ಯಾಕೆಂದರೆ ಇದು ಸತ್ಯ ಮತ್ತು ಪರಿಶುದ್ಧ ಮಾರ್ಗ ವಾಗಿದೆ. ಕ್ರೈಸ್ತರು ಕೆಲವು ಸಾರಿ "ಇಕ್ಕಟ್ಟಾದ - ಮನಸ್ಸಿನವರು" ಎಂದು ಕರೆಯಲ್ಪಟ್ಟಿದ್ದಾರೆ, "ವಿಶಾಲ ಮನಸ್ಸಿನವರು" ಎಂದು ಕರೆದಿದ್ದಿಯಾದರೆ ಅದು ವಿಶೇಷ ಗುಣವಾಗಿರುತ್ತದೆ. ಈ ಮೂಲ ವಾಕ್ಯಭಾಗದಲ್ಲಿ ಯೇಸು ಇದಕ್ಕೆ ತದ್ವಿರುದ್ಧವಾಗಿ ಪ್ರತಿಪಾದಿಸಿದ್ದಾನೆ. ಆತನು ಹೇಳಿದ್ದೇ ನೆಂದರೆ "ವಿಶಾಲ - ಮನಸ್ಸು" ಹೊಂದಿರು ಎಂದು ಹೇಳುವಾಗ ಅದು "ತೆರದ - ಮನಸ್ಸಿಗೆ" ಸರಿಸಮವಾದದ್ದಲ್ಲ. ತೆರೆದ ಮನಸ್ಸು ಹೊಂದಿರುವದು ಒಳ್ಳೆಯದು ಯಾಕೆಂದರೆ ಇದು ನಮಗೆ ಸತ್ಯವನ್ನು ಹುಡುಕುವದು ಮತ್ತು ಅರ್ಥಮಾಡಿಕೊಳ್ಳುವದಕ್ಕೆ ಇದು ಸಹಾಯವಾಗಿದೆ. ಇದಕ್ಕೆ ಭಿನ್ನವಾಗಿ, ವಿಶಾಲ - ಮನಸ್ಸು ಹೊಂದಿರುವದರ ಅರ್ಥ ಯಾವುದೇ ವಿರುದ್ಧವಾದ ವಿಷಯವನ್ನು ಅಂಗಿಕರಿಸುವದು, ನೀತಿಯತೆ, ಅಥವಾ ವ್ಯತ್ಯಾಸವುಳ್ಳ ಜೀವನ ಶೈಲಿ ಅಂಗೀ ಕರಿಸುವಂಥದ್ದಾಗಿದೆ. ಅದಕ್ಕಾಗಿಯೇ ಯೇಸು ವಿಶಾಲ - ಮಾರ್ಗದಲ್ಲಿ ನಡೆಯುವದು ತಪ್ಪಿಸಿಕೊಳ್ಳಿರಿ ಎಂದು ಯೇಸು ಎಚ್ಚರಿಸಿದ್ದಾನೆ.

ಯೇಸು ಹೇಳಿದ್ದು, "ಆದದರಿಂದ ನೀವು ನಿಮ್ಮ ಪಾಪಗಳಲ್ಲಿಯೇ ಸಾಯುವಿರೆಂದು ನಿಮಗೆ ಹೇಳಿದನು; ನನ್ನನ್ನು ಆತನೆಂದು ನೀನು ನಂಬದೆ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರೆಂದು ಹೇಳಿದನು," ಮತ್ತು "ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು" (ಯೋಹಾನ 8:24, 32). ಇದನ್ನು ಸಹ ಆತನು ಹೇಳಿದನು, "ಪರಲೋಕದಲ್ಲಿರುವ ನನ್ನ ತಂದೆಯು ಸಿಡದೆ ಇರುವ ಗಿಡಗಳೆಲ್ಲಾ ಬೇರಿನೊಂದಿಗೆ ಕಿತ್ತು ಹಾಕಲ್ಪಡುವವು" (15:13). ಪೌಲನು ತಿಮೊಥೆಯನಿಗೆ ಒತ್ತಾಯ ಮಾಡಿ, "ಕೆಲವರಿಗೆ ಬೇರೆ ಉಪದೇಶ ಮಾಡಬಾರದೆಂದು ಅವರಿಗೆ ಸೂಚಿಸಿದನು" (1 ತಿಮೊಥೆ 1:3), ಮತ್ತು "ನಿನ್ನ ವಿಷಯದಲ್ಲಿಯೂ ನಿನ್ನ ಉಪದೇಶದ ವಿಷಯದಲ್ಲಿಯೂ ಎಚ್ಚರಿಕೆಯಾಗಿರು. ನೀನು ಈ

ಕಾರ್ಯಗಳಲ್ಲಿ ನಿರತನಾಗಿರು; ಹೀಗಿರುವದರಿಂದ ನಿನ್ನನ್ನು ನಿನ್ನ ಉಪದೇಶ ಕೇಳುವವರನ್ನು ರಕ್ಷಿಸುವಿ" (1 ತಿಮೊಥೆ 4:16). ನಿತ್ಯಜೀವಕ್ಕೆ ನಡೆಸುವ ಮಾರ್ಗ ವಿಪರೀತ ಇಕ್ಕಟ್ಟಾಗಿರುತ್ತದೆ, ಮತ್ತು ಅಲ್ಲಿಗೆ ಹೋಗುವವರು ಸ್ವಲ್ಪ ಜನರು.

## "ಸ್ವಾಮೀ, ಸ್ವಾಮೀ" (7:21-23)

ನ್ಯಾಯತೀರ್ಪಿನ ದಿನದಂದು ಕೆಲವು ಜನರು ತಂದೆಯ ಚಿತ್ತವನ್ನು ಮಾಡದೆ ಇರುವದನ್ನು ಕಂಡುಕೊಳ್ಳುವದು ಎಷ್ಟು ಭಯಾನಕವಾಗಿದೆ! ಒಬ್ಬ ವ್ಯಕ್ತಿ ನಂಬಿಕೆಯ ಕ್ರೈಸ್ತ ಜೀವಿತ ಜೀವಿಸಿದ್ದರೆ ಇದರ ಕುರಿತಾಗಿ ಅವನು ಭರವಸೆಯನ್ನು ತಿಳಿದುಕೊಳ್ಳಬಹುದೋ? ಪೌಲನು ಹೀಗೆ ಬರೆದಿದ್ದಾನೆ, "ಕ್ರಿಸ್ತ ನಂಬಿಕೆಯಲ್ಲಿ ಇದ್ದಿರೋ ಇಲ್ಲವೋ ಎಂದು ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ, ನಿಮ್ಮನ್ನು ಪರಿಶೋಧಿಸಿಕೊಳ್ಳಿರಿ. ಏನು, ಯೇಸು ಕ್ರಿಸ್ತನು ನಿಮ್ಮಲ್ಲಿದ್ದಾನೆಂಬದು ನಿಮ್ಮನ್ನು ಕುರಿತು ನಿಮಗೆ ಚೆನ್ನಾಗಿ ತಿಳಿಯುವದಿಲ್ಲವೋ? ಆತನು ನಿಮ್ಮಲಿಲ್ಲದಿದ್ದರೆ ನೀವು ಅಯೋಗ್ಯರೇ" (2 ಕೊರಿಂಥ 13:5). ನಮ್ಮ ಜೀವಿತಕ್ಕೆ ಕ್ರೈಸ್ತರ ಕೃಪೆಗಳನ್ನು ಸೇರಿಸಿಕೊಳ್ಳುವದರಿಂದ ನಮ್ಮ "ಕರೆಯುವಿಕೆ" ಯನ್ನು "ದೃಢಪಡಿಸಿ" ಕೊಳ್ಳಬಹುದೆಂದು ಪೇತ್ರನು ಸರಳವಾಗಿ ಹೇಳಿದ್ದಾನೆ (2 ಪೇತ್ರ 1:5-11).

---

ಟಿಪ್ಪಣಿಗಳು

[1]Douglas R. A. Hare, *Matthew,* Interpretation (Louisville: John Knox Press, 1993), 76. [2]Mishnah *Sotah* 1.7; ನೋಡಿರಿ Talmud *Shabbath* 127b. [3]Michael J. Wilkins, "Matthew," in *Zondervan Illustrated Bible Backgrounds Commentary*, vol. 1, *Matthew, Mark, Luke*, ed. Clinton E. Arnold (Grand Rapids, Mich.: Zondervan, 2002), 50. [4]Talmud *Rosh ha-Shanah* 16b. [5]David Hill, *The Gospel of Matthew*, The New Century Bible Commentary (Grand Rapids. Mich.: Wm. B. Eerdmans Publishing Co., 1992), 146; ನೋಡಿರಿ *Leviticus Rabbah* 29.3. [6]Craig S. Keener, *A Commentary on the Gospel of Matthew* (Grand Rapids, Mich.: Wm. B. Eerdmans Publishing Co., 1999), 241. [7]ನೋಡಿರಿ Talmud *Arakhin* 16b; *Baba Bathra* 15b. [8]Talmud *Baba Metzia* 59b. [9]1 Maccabees 1:16, 41, 42, 47; 2 Maccabees 6:18-7:42. [10]ಯೆಹೂದ್ಯ ಧರ್ಮಶಾಸ್ತ್ರದಲ್ಲಿ ಮುಖ್ಯವಾದ ಬೋಧನೆಯನ್ನು "ಮುತ್ತುಗಳು" ಎಂದು ಗುರುತಿಸುತ್ತಾರೆ. (*Kiddushin* 39b.)

[11]"ತಟ್ಟುವದು" ಸಹ ಅಲಂಕಾರಿಕವಾಗಿ "ಪ್ರಾರ್ಥನೆ"ಗಾಗಿ ಯೆಹೂದ್ಯ ಧರ್ಮಶಾಸ್ತ್ರದಲ್ಲಿ ಉಪಯೋಗಿಸಿದೆ, ಇದನ್ನು ಹೇಳಿದವರು Mordecai "ಕರುಣೆಯೆಂಬ ಬಾಗಿಲನ್ನು ತಟ್ಟು ಮತ್ತು ಅದು ಅವನಿಗೆ ತೆರೆಯುವದು" (*Megillah* 12b). [12]R. T. France, *The Gospel According to Matthew*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 144; Robert H. Mounce, *Matthew*, New International Biblical Commentary (Peabody, Mass.: Hendrickson Publishers, 1991), 66. [13]Edwin Firmage, *"Zoology,"* in *The Anchor Bible Dictionary*, ed. David Noel Freedman (New York: Doubleday, 1992), 6:1147. [14]Hill, 149. [15]Confucius *Analects* 15.23. [16]Isocrates *Nicocles* (*The Cyprians*) 61. [17]Diogenes Laertius *Lives of Eminent Philosophers* 5.21. [18]Talmud *Shabbath* 31a. [19]Tobit 4:15 (NRSV). [20]Sirach 31:15 (NRSV).

[21]Letter of Aristeas 207. [22]ಲೂಕ 6:31ರಲ್ಲಿ ಶತ್ರುಗಳನ್ನು ವಿರೋಧಿಸದೆ ಪ್ರೀತಿಸಬೇಕೆಂಬ ಭಾವನೆಯು ಯೇಸು ಕೊಟ್ಟ ಬಂಗಾರದ ನಿಯಮದ ಸಂದರ್ಭದಲ್ಲಿ ಕಾಣಿಸಿಕೊಳ್ಳುತ್ತದೆ (ನೋಡಿರಿ ಲೂಕ 6:27-36). [23]Mounce, 66. [24]Jack P. Lewis, *The Gospel According to Matthew,* Part 1, The Living Word Commentary (Austin, Tex.: Sweet Publishing Co., 1976), 113. [25]Talmud *Shabbath* 31a. [26]France, 146. [27]Robert H. Gundry, *Matthew: A Commentary on His Literary and Theological Art* (Grand Rapids, Mich.: Wm. B. Eerdmans Publishing Co., 1982), 127. [28]France, 146. [29]ಯೆಹೂದ್ಯ ಧರ್ಮಗುರುಗಳ ಸಾಹಿತ್ಯದಲ್ಲಿ, ಎರಡು ಮಾರ್ಗಗಳನ್ನು ಸಹ ನಿರೀಕ್ಷಿಸಲಾಗಿದೆ. ಈ ಮಾರ್ಗಗಳು ಪರದೈಸಿಗಾಗಲಿ ಇಲ್ಲವೆ ಗೆಹನ್ನಾಗಲಿ ನಡಿಸುತ್ತದೆ. (Talmud *Berakoth* 28b.) [30]Donald A. Hagner, *Matthew 1-13,* Word Biblical Commentary, vol. 33A (Dallas: Word Books, 1993), 178.

[31]ನೋಡಿರಿ Josephus *Antiquities* 20.5.1, 2; *Wars* 2.13.5. [32]ನೋಡಿರಿ *Didache* 11-13; 16.3; Ignatius *Philadelphians* 2.1, 2. [33]Hill, 151. [34]ಒಳ್ಳೆಯ ಫಲಕ್ಕಾಗಿ ಆಧಾರ ವಾಕ್ಯಗಳಿಗಾಗಿ ನೋಡಿರಿ ಯೋಹಾನ 15:8; ಆದಿಕಾಂಡ 5:22-24; ಎಫೆಸ 5:9-12; ಕೊಲೊಸ್ಸೆ 1:10; ಯಾಕೋಬ 3:17, 18. [35]"ಆ ದಿನ"ಕ್ಕೆ ಆಧಾರ ವಾಕ್ಯಗಳಿಗಾಗಿ ನೋಡಿರಿ ಮತ್ತಾಯ 24:36; ಲೂಕ 10:12; 17:31; 21:34; 2 ಥೆಸಲೋನಿಕ 1:10: 2 ತಿಮೊಥೆ 1:12, 18; 4:8. [36]ನ್ಯಾಯ ತೀರ್ಪಿನ ದಿನದ ವಿವರಣೆಗಾಗಿ ನೋಡಿರಿ ಮತ್ತಾಯ 24:36-51; 25:31-46; ಅಪೊಸ್ತಲರ ಕೃತ್ಯಗಳು 17:30, 31; 2 ಕೊರಿಂಥ 5:10; ಪ್ರಕಟನೆ 20:11-15. [37]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 182, n. 87. [38]Mounce, 70. [39]Wilkins, 53-54; ನೋಡಿರಿ Gordon Franz, "The Parable of the Two Builders," *Archaeology in the Biblical World 3* (June 1995): 6-11. [40]A. T. Robertson, *Word Pictures in the New Testament, vol. 1, The Gospel According to Matthew - The Gospel According to Mark* (Nashville: Broadman Press, 1930), 63.

[41]Mounce, 64. [42]Herbert Hoover, address to World‘s Conference of the Young Men‘s Christian Association (YMCA), Cleveland, Ohio, 8 August 1931. [43]ಈ ಸಾಮ್ಯದ ಮೂಲ ಬರಹಗಾರನು ಯಾರೆಂದು ಗೊತ್ತಿರುವದಿಲ್ಲ.